# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಜುಲೈ 3, 2021

ಸಂಪುಟ : 48 ಸಂಚಿಕೆ : 50 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಸಚಿವ ಶ್ರೀರಾಮುಲು ಆಪ್ತನ ಬಂಧನ

### ಮಾಹಿತಿ ನೀಡದೆ ಬಂಧಿಸಿದ್ದಕ್ಕೆ ರಾಮುಲು ಅಸಮಾಧಾನ

ಬೆಂಗಳೂರು, ಜು. 2 - ಮಾಹಿತಿ ನೀಡದೇ, ತಮ್ಮ ಆಪ್ತನನ್ನು ಬಂಧಿಸಿರುವುದಕ್ಕೆ ಅಸಮಧಾನಗೊಂಡ ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಬೇಸರಗೊಂಡು, ತಮ್ಮ ಸ್ಥಾನ ತೊರೆಯಲು ಮುಂದಾದ ಘಟನೆ ನಡೆದಿದೆ.

ಅಷ್ಟೇ ಅಲ್ಲ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಪುತ್ರ ವಿಜಯೇಂದ್ರ ವಿರುದ್ಧ ಕಿಡಿಕಾರಿದ್ದಾರೆ.

ಶ್ರೀರಾಮುಲು ಅವರನ್ನು ಸಮಾಧಾನಪಡಿಸಲು ಮುಖ್ಯಮಂತ್ರಿಯವರು ನಡೆಸಿದ ಯತ್ನ ಮಧ್ಯಾಹ್ನದವರೆಗೂ ಫಲಪ್ರದವಾಗಿರಲಿಲ್ಲ.

ತಮಗೆ ಮಾಹಿತಿ ನೀಡದೇ, ಸರ್ಕಾರಿ ನಿವಾಸದಲ್ಲೇ ಬಂಧಿಸಿರುವುದು, ಸಿಸಿಬಿಗೆ ದೂರು ನೀಡುವುದಕ್ಕೂ ಮುನ್ನ ತಮ್ಮ ಗಮನಕ್ಕೆ ಬಾರದೆ. ಸರ್ಕಾರಿ ನಿವಾಸದಲ್ಲೇ ಆಪ್ತನನ್ನು ಬಂಧಿಸಿರುವುದರಿಂದ ಶ್ರೀರಾಮುಲು ಉಗ್ರ ರೂಪ ತಾಳಿದ್ದಾರೆ.

ವಿಜಯೇಂದ್ರ ಸಿಸಿಬಿಗೆ ದೂರು ನೀಡುವುದಕ್ಕೂ ಮುನ್ನ ತಮ್ಮ ಗಮನಕ್ಕೆ ತಂದಿದ್ದರೆ, ಅದನ್ನು ಪರಿಹರಿಸುತ್ತಿದ್ದೆ. ಸಂಪುಟದ ಸಹೋದ್ಯೋಗಿಯ ಕಚೇರಿ ವಿರುದ್ಧವೇ ದೂರು ನೀಡುವುದರ ಮೂಲಕ ತಮ್ಮನ್ನು ರಾಜಕೀಯವಾಗಿ ಮುಗಿಸಲು ನಡೆಸಿರುವ ಕುತಂತ್ರ ಇದಾಗಿದೆ ಎಂದು ಕಿಡಿಕಾರಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ಪಕ್ಷದಲ್ಲಿ ಹಿರಿಯರಿಗೆ ಅವಮಾನವಾಗುತ್ತದೆ' ಎನ್ನುವುದರ ಮೂಲಕ ಮುಖ್ಯಮಂತ್ರಿ (3ನೇ ಪುಟಕ್ಕೆ)

### ಮುಖಂಡರ ಹೆಸರು ದುರ್ಬಳಕೆ ಎಚ್ಚರವಾಗಿರಿ : ವಿಜಯೇಂದ್ರ

ಬೆಂಗಳೂರು, ಜು. 2 - ಸಾರ್ವಜನಿಕ ಕ್ಷೇತ್ರದಲ್ಲಿರುವ ಮುಖಂಡರ ಹೆಸರನ್ನು ದುರ್ಬಳಕೆ ಮಾಡಿಕೊಂಡಿರುವ ಹಾಗೂ ವಂಚಿಸುವವರ ಬಗ್ಗೆ ಸಮಾಜ ಎಚ್ಚರದಿಂದಿರಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಜನರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಸಚಿವ ಶ್ರೀರಾಮುಲು ಆಪ್ತನ ವಿರುದ್ಧ ದೂರು ನೀಡಿರುವುದಕ್ಕೆ ಸಂಬಂಧಿಸಿದಂತೆ ಅವರು ಈ ಹೇಳಿಕೆ ನೀಡಿದ್ದಾರೆ.

ಸಾರ್ವಜನಿಕ ಕ್ಷೇತ್ರದಲ್ಲಿರುವಾಗ ನೆರವು ಕೇಳುವವರನ್ನು ಅನುಮಾನಿಸಿ ನೋಡಲಾಗದು. ಹಾಗೆಂದು ಎಚ್ಚರ ತಪ್ಪಬಾರದು. ಹೆಸರು ದುರುಪಯೋಗಪಡಿಸಿಕೊಂಡು, ಕಳಂಕ ಹಚ್ಚುವ ವಂಚಕರಿಂದ ತೊಂದರೆ (3ನೇ ಪುಟಕ್ಕೆ)

**ಸಮಾಜ ಕಲ್ಯಾಣ ಸಚಿವರ ಆಪ್ತ ಸಹಾಯಕ ಅರೆಸ್ಟ್ ಆಗಿದ್ದಾನೆ. ಆತನ ವಿರುದ್ಧ ಸ್ವತಃ ಸಿಎಂ ಮಗ ವಿಜಯೇಂದ್ರನೇ ಕಂಪ್ಲೆಂಟ್ ಮಾಡಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು.**

**- ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ**

# ಲಂಚ ಬಿಜೆಪಿಗೆ ಹೊಸದಲ್ಲ

### ಯಡಿಯೂರಪ್ಪನವರ ಮಗ ಹಾಗೂ ಅಳಿಯ ಬ್ಯಾಂಕ್ ಮುಖಾಂತರ ಲಂಚ ತೆಗೆದುಕೊಳ್ಳುತ್ತಿದ್ದಾರೆ ಎಂಬ ಆರೋಪವಿದೆ: ಸಿದ್ದರಾಮಯ್ಯ

ದಾವಣಗೆರೆ, ಜು.2- ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ 20 ರಿಂದ 25 ಪರ್ಸೆಂಟೇಜ್ ಸರ್ಕಾರವಾಗಿದ್ದು, ಲಂಚ ಇಲ್ಲದೇ ಯಾವುದೇ ಕೆಲಸ ನಡೆಯುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲೆಂದು ಬೆಂಗಳೂರಿನಿಂದ ಹೆಲಿಕ್ಯಾಪ್ಟರ್ ಮೂಲಕ ನಗರದ ಬಾಪೂಜಿ ಎಂಬಿಎ ಕಾಲೇಜಿನ ಹೆಲಿಪ್ಯಾಡ್‌ಗೆ ಇಂದು ಮಧ್ಯಾಹ್ನ ಆಗಮಿಸಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಪುತ್ರ ವಿಜಯೇಂದ್ರೇನೇ ಡಿ ಫ್ಯಾಕ್ಟರ್ ಮುಖ್ಯಮಂತ್ರಿಯಾಗಿದ್ದು, ಯಡಿಯೂರಪ್ಪ ಡಿ ಜೀರೋ ಸಿಎಂ ಎಂದು ಲೇವಡಿ ಮಾಡಿದರು.

ಯಡಿಯೂರಪ್ಪನವರ ಮಗ ಹಾಗೂ ಅಳಿಯ ಬ್ಯಾಂಕ್ ಮುಖಾಂತರ ಲಂಚ ತೆಗೆದುಕೊಳ್ಳುತ್ತಿದ್ದಾರೆ ಎಂಬ ಆರೋಪವಿದೆ. ಚೆಕ್ ಮೂಲಕ ಲಂಚ ಪಡೆಯುವ ವಿಚಾರ ಬಿಜೆಪಿಗೆ ಹೊಸದಲ್ಲ. ಬಿಜೆಪಿ ಪಾರ್ಟಿಗೆ ಆರ್‌ಟಿಜಿಎಸ್ ಮೂಲಕ ಹಣ ಪಡೆಯಲಾಗುತ್ತಿದೆ ಎಂದು ಆಪಾದಿಸಿದರು.

ಕಾಂಗ್ರೆಸ್‌ನಲ್ಲಿ ಯಾವುದೇ ಒಳ ಜಗಳವಿಲ್ಲ. ಗುಂಪುಗಾರಿಕೆಯೂ ಇಲ್ಲ. ನಾವೆಲ್ಲ ಒಟ್ಟಾಗಿ ಇದ್ದೇವೆ. ಕಾಂಗ್ರೆಸ್ ನಲ್ಲಿ ನನ್ನ ನೇತೃತ್ವದಲ್ಲಿ ಚುನಾವಣೆಗೆ ಹೋಗಬೇಕು, ಮುಂದಿನ ಮುಖ್ಯಮಂತ್ರಿ ನಾನಾಗಬೇಕು ಎಂದು ಯಾರು ಹೇಳಿದ್ದಾರೆ ? ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಮುಖ್ಯಮಂತ್ರಿ ಆಯ್ಕೆ ಬಗ್ಗೆ ಶಾಸಕರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಆಗ ಹೊಸದಾಗಿ ಆಯ್ಕೆಯಾದ ಶಾಸಕರು ಮತ್ತು ಶಾಸಕಾಂಗದ ಪಕ್ಷನಾಯಕರ ಅಭಿಪ್ರಾಯ ಪಡೆದು ಕಾಂಗ್ರೆಸ್ ಹೈಕಮಾಂಡ್ ಸಿಎಂ ಅಭ್ಯರ್ಥಿಯನ್ನು ಅಂತಿಮಗೊಳಿಸಲಿದೆ ಎಂದು ಸ್ಪಷ್ಟಪಡಿಸಿದರು.

ಕೊರೊನಾದಿಂದ ನಿಧನ ಹೊಂದಿದವರಿಗೆ ವಿಪತ್ತು ನಿರ್ವಹಣೆ ಯೋಜನೆಯಡಿ ಪ್ರತಿಯೊಬ್ಬರಿಗೂ 5 ಲಕ್ಷ ಸಹಾಯ ಧನ ನೀಡಲು ಅವಕಾಶವಿದೆ. ಈ ಬಗ್ಗೆ ನಾವು ಕೂಡ ಆಗ್ರಹಿಸಿದ್ದೆವು. ಇದೀಗ ಸುಪ್ರೀಂ ಕೋರ್ಟ್ ಕೂಡ ಇದನ್ನೇ ಹೇಳಿದೆ ಎಂದು ಅವರು ಹೇಳಿದರು.

ಕೊರೊನಾದಿಂದ ಸಾವನ್ನಪ್ಪಿದವರಿಗೆ 5 ಲಕ್ಷ ರೂ. ಪರಿಹಾರವನ್ನು ರಾಜ್ಯ ಸರ್ಕಾರ ನೀಡಬೇಕು. ಪ್ರವಾಹ ಸೇರಿದಂತೆ ರಾಷ್ಟ್ರೀಯ ವಿಪತ್ತು ಸಂಭವಿಸಿದಾಗ ಐದು ಲಕ್ಷ ರೂ. ನೀಡಲಾಗುತ್ತೆ. ಅಂತೆಯೇ ಈಗ ಕೊರೊನಾ ಮಹಾಮಾರಿಯಿಂದ ಮರಣವನ್ನಪ್ಪಿದವರಿಗೆ ಹೆಚ್ಚಿನ ಪರಿಹಾರ ಕೊಡಬೇಕು ಎಂಬುದು ನಮ್ಮ ಒತ್ತಾಯ ಎಂದರು.

ನಾನು ಸರ್ಕಾರಕ್ಕೆ ಎರಡರಿಂದ ಮೂರು ಬಾರಿ ಪತ್ರ ಬರೆದಿದ್ದೇನೆ. ನಾವು (2ನೇ ಪುಟಕ್ಕೆ)



ಖಾಸಗಿ ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ದಾವಣಗೆರೆಗೆ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಪೂಜಿ ಎಂಬಿಎ ಹೆಲಿಪ್ಯಾಡ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದರು.

## ಬಿಜೆಪಿ ಸರ್ಕಾರ ಸಂಪೂರ್ಣ ಶ್ರೀಮಂತರ ಪರ



ದಾವಣಗೆರೆ, ಜು.2- ಕೊರೊನಾ ಸಂಕಷ್ಟದಲ್ಲಿರುವ ಪರಿಶಿಷ್ಟ ಜಾತಿ, ಪಂಗಡ ಮತ್ತು ಬಿಪಿಎಲ್ ಫಲಾನುಭವಿಗಳಿಗೆ ತಲಾ 10 ಸಾವಿರ ರೂ. ನೆರವನ್ನು ರಾಜ್ಯ ಸರ್ಕಾರ ನೀಡಬಹುದಾಗಿತ್ತು. ಆದರೆ, ಇದು ಸಂಪೂರ್ಣ ಶ್ರೀಮಂತರ ಪರವಾಗಿದೆ ಎಂದು ಮಾಜಿ ಸಚಿವ ಹೆಚ್.ಆಂಜನೇಯ ಆರೋಪಿಸಿದ್ದಾರೆ.

ಇಂದಿಲ್ಲಿ ಬಾಪೂಜಿ ಎಂಬಿಎ ಹೆಲಿಪ್ಯಾಡ್‌ನಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಸಮಾಜ ಕಲ್ಯಾಣ ಸಚಿವನಾಗಿದ್ದ ಸಂದರ್ಭದಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಎಸ್‌ಸಿಪಿ, ಟಿಎಸ್‌ಪಿ ಯೋಜನೆ ಜಾರಿಗೆ ತರಲಾಯಿತು. ಇದರನ್ವಯ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯ ಬಜೆಟ್‌ನ ಶೇ.24 ರಷ್ಟು ಹಣ ಎಸ್‌ಸಿ, ಎಸ್‌ಟಿ ಕಲ್ಯಾಣಕ್ಕಾಗಿ ಮೀಸಲಿರಿಸಲಾಗಿದೆ. ಈ ಹಣದಲ್ಲಿ ಕೋವಿಡ್ ಸಂಕಷ್ಟದಲ್ಲಿ ಬಿಪಿಎಲ್ ಫಲಾನುಭವಿಗಳಿಗೆ ತಲಾ ಹತ್ತು ಸಾವಿರ ರೂ. ನೆರವು ನೀಡಬೇಕಾಗಿತ್ತು. ಆದರೆ, ಬಿಜೆಪಿ ಸರ್ಕಾರ ದೀನ-ದಲಿತರು, ಬಡವರ ಬಗ್ಗೆ ಕಾಳಜಿ ಇಲ್ಲದಿರುವುದರಿಂದ ಈ ಕೆಲಸ ಮಾಡಿಲ್ಲ ಎಂದು ದೂರಿದರು. ಸಚಿವರ ಆಪ್ತ ಸಹಾಯಕರು ಬದ್ಧತೆ (2ನೇ ಪುಟಕ್ಕೆ)

## ಬೇಳೆ ದಾಸ್ತಾನಿನ ಮೇಲೆ ಕೇಂದ್ರ ನಿರ್ಬಂಧ

### ಬೆಲೆ ಏರಿಕೆ ತಡೆಗೆ ಅಕ್ಟೋಬರ್‌ವರೆಗೆ ದಾಸ್ತಾನಿಗೆ ಕಡಿವಾಣ

ನವದೆಹಲಿ, ಜು. 2 – ಕಾಳಸಂತೆ ತಡೆ ಹಾಗೂ ಬೆಲೆ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ಹೆಸರು ಬೇಳೆ ಹೊರತು ಪಡಿಸಿ ಉಳಿದೆಲ್ಲ ಬೇಳೆಗಳ ದಾಸ್ತಾನಿನ ಮೇಲೆ ಕೇಂದ್ರ ಸರ್ಕಾರ ಅಕ್ಟೋಬರ್‌ವರೆಗೆ ನಿಯಂತ್ರಣ ಹೇರಿದೆ. ಸಗಟು ಮಾರಾಟಗಾರರು, ಚಿಲ್ಲರೆ ಮಾರಾಟಗಾರರು, ಆಮದು ವ್ಯಾಪಾರಿಗಳು ಹಾಗೂ ಮಿಲ್ಲುಗಳ ಮಾಲೀಕರಿಗೆ ನಿರ್ಬಂಧ ಅನ್ವಯವಾಗಲಿದೆ. ಅಕ್ಟೋಬರ್‌ವರೆಗೆ ಈ ನಿರ್ಬಂಧ ಜಾರಿಯಲ್ಲಿರಲಿದೆ.

ತಕ್ಷಣದಿಂದ ಜಾರಿಗೆ ಬರುವಂತೆ ದಾಸ್ತಾನು ಮಿತಿ ಹೇರಲಾಗಿದೆ. ಈ ಬಗ್ಗೆ ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ ಆದೇಶ ಹೊರಡಿಸಿದೆ. ಆದೇಶದ ಅನ್ವಯ ಸಗಟು ಮಾರಾಟಗಾರರು ಒಂದು ರೀತಿಯ ಬೇಳೆಯ 200 ಟನ್‌ಗಿಂತ ಹೆಚ್ಚು ದಾಸ್ತಾನು ಹೊಂದುವಂತಿಲ್ಲ. ಚಿಲ್ಲರೆ ಮಾರಾಟಗಾರರಿಗೆ ಈ ಮಿತಿ 5 ಟನ್ ಆಗಿದೆ.

ಮಿಲ್ಲುಗಳು ಕಳೆದ ಮೂರು ತಿಂಗಳ ಉತ್ಪಾದನೆಯ ಇಲ್ಲವೇ ವಾರ್ಷಿಕ ಸಾಮರ್ಥ್ಯದ ಶೇ.25ರಷ್ಟು ದಾಸ್ತಾನಿನಲ್ಲಿ ಯಾವುದು ಹೆಚ್ಚೋ ಅದನ್ನು ಹೊಂದಬಹುದಾಗಿದೆ.

ಆಮದುಗಾರರಿಗೆ ಮೇ 15ಕ್ಕೂ ಮುಂಚೆ ಆಮದು ಮಾಡಿಕೊಂಡ ಸರಕಿನ ದಾಸ್ತಾನು (3ನೇ ಪುಟಕ್ಕೆ)




**ಜಗಳೂರು ಆಸ್ಪತ್ರೆಗೆ ಆಂಬ್ಯುಲೆನ್ಸ್**

ದಾವಣಗೆರೆ, ಜು. 2- ಜಗಳೂರಿನ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಕಾರ್ಗಿಲ್ ಕಂಪನಿ ನೀಡಿರುವ 33 ಲಕ್ಷ ರೂ. ಬೆಲೆಯ ಸುಸಜ್ಜಿತವಾದ ಆಂಬ್ಯುಲೆನ್ಸ್ ಅನ್ನು ಶಾಸಕ ಎಸ್.ವಿ. ರಾಮಚಂದ್ರ ಅವರಿಗೆ ಇಂದು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮತ್ತು ಇತರರು ಉಪಸ್ಥಿತರಿದ್ದರು.

## ಬಾಲ ನ್ಯಾಯ ಕಾಯ್ದೆಯಡಿ ಸಂಬಂಧಿಗಳೂ ದತ್ತು ಪಡೆಯಬಹುದು : ಹೈಕೋರ್ಟ್

ನಾಗಪುರ, ಜು 2- ಬಾಲ ನ್ಯಾಯ ಕಾಯ್ದೆಯಲ್ಲಿ ಅನಾಥರು, ಪರಿತ್ಯಕ್ತರು ಹಾಗೂ ಕಾನೂನು ಜೊತೆ ಸಂಘರ್ಷ ಇರುವವರು ಮಾತ್ರ ದತ್ತಿಗೆ ಒಳಗಾಗಬೇಕು ಎಂದು ತಿಳಿಸಿಲ್ಲ. ಮಗುವಿನ ಸಂಬಂಧಿಕರೂ ಸಹ ದತ್ತು ಪಡೆಯಬಹುದು ಎಂದು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ ಹೇಳಿದೆ.

ಸಹೋದರನ ಪುತ್ರನ ದತ್ತು ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಈ ತೀರ್ಪು ನೀಡಿದೆ. ಸಹೋದರನ ಮಗನನ್ನು ದತ್ತು ಪಡೆದ ಕ್ರಮವನ್ನು ಜಿಲ್ಲಾ ನ್ಯಾಯಾಲಯ ತಳ್ಳಿ ಹಾಕಿತ್ತು. ನಂತರ ಸಹೋದರ ಹಾಗೂ ಪತ್ನಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಬಾಲ ನ್ಯಾಯ ಕಾಯ್ದೆಯ ಅನ್ವಯ ಸಂಬಂಧಿಕರೂ ಸಹ ಮಗುವನ್ನು ದತ್ತು (2ನೇ ಪುಟಕ್ಕೆ)

## ಕೊರೊನಾ ಹೆಚ್ಚಳ: ಆರು ರಾಜ್ಯಗಳಿಗೆ ಕೇಂದ್ರದ ತಂಡ

ನವದೆಹಲಿ, ಜು. 2- ಕೊರೊನಾ ಪ್ರಕರಣಗಳು ಹೆಚ್ಚಾಗಿ ಕಂಡು ಬರುತ್ತಿರುವ ಕೇರಳ, ಅರುಣಾಚಲ ಪ್ರದೇಶ, ತ್ರಿಪುರ, ಒಡಿಶಾ, ಛತ್ತೀಸ್‌ಘಡ ಹಾಗೂ ಮಣಿಪುರಗಳಿಗೆ ಕೇಂದ್ರ ಸರ್ಕಾರ ಬಹುಶಿಸ್ತೀಯ (2ನೇ ಪುಟಕ್ಕೆ)

## ಆಂಧ್ರ – ತೆಲಂಗಾಣ ನಡುವೆ ಜಲ ವಿವಾದ, ಅಣೆಕಟ್ಟೆಗಳಿಗೆ ಬಿಗಿ ಭದ್ರತೆ

ಹೈದರಾಬಾದ್, ಜು. 2 – ಆಂಧ್ರ ಪ್ರದೇಶ ಹಾಗೂ ತೆಲಂಗಾಣ ನಡುವೆ ಕೃಷ್ಣ ನದಿ ನೀರು ಹಂಚಿಕೆ ಹಾಗೂ ವಿದ್ಯುತ್ ಉತ್ಪಾದನೆಯ ವಿವಾದ ಭುಗಿಲೆದ್ದಿದ್ದು, ಉಭಯ ರಾಜ್ಯಗಳು ಹಂಚಿಕೊಂಡಿರುವ ನಾಗಾರ್ಜುನ ಸಾಗರ ಹಾಗೂ ಮತ್ತಿತರೆ ಅಣೆಕಟ್ಟೆಗಳಲ್ಲಿ ಪೊಲೀಸ್ ಬಂದೋಬಸ್ತ್ ಹೆಚ್ಚಿಸಿವೆ.

ವಿದ್ಯುತ್ ಉತ್ಪಾದನೆಗೆ ಧಕ್ಕೆಯಾಗುವುದನ್ನು ತಡೆಯಲು ನಾಗಾರ್ಜುನ ಸಾಗರದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ತೆಲಂಗಾಣ ಪೊಲೀಸರು ಹೇಳಿದ್ದಾರೆ. ಆಂಧ್ರ ಪ್ರದೇಶ ಪೊಲೀಸರೂ ಸಹ ತಮ್ಮ ಸಿಬ್ಬಂದಿ ನಿಯೋಜಿಸಿದ್ದರು. ಆದರೆ, ಶುಕ್ರವಾರ ಸಿಬ್ಬಂದಿ ಕಡಿಮೆ ಮಾಡಲಾಗಿದೆ. ಆಂಧ್ರ ಪ್ರದೇಶದವು ರಾಯಲ್‌ಸೀಮೆ ಏತ ನೀರಾವರಿ ಯೋಜನೆ ಮತ್ತಿತರೆ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ತೆಲಂಗಾಣ ಅಸಮಾಧಾನಕ್ಕೆ ಕಾರಣವಾಗಿದೆ. ಈ ಯೋಜನೆ ಕಾನೂನು ಬಾಹಿರ ಎಂದು ತೆಲಂಗಾಣ ಆರೋಪಿಸುತ್ತಿದೆ.

## ಜೂನ್‌ನಲ್ಲಿ ರಫ್ತು ಶೇ.47.34 ಹೆಚ್ಚಳ

ನವದೆಹಲಿ, ಜು. 2 – ಕಳೆದ ಜೂನ್ ತಿಂಗಳಲ್ಲಿ ರಫ್ತು ಶೇ.47.34ರಷ್ಟು ಹೆಚ್ಚಾಗಿದ್ದು 32.46 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಎಂಜಿನಿಯರಿಂಗ್ ಉಪಕರಣ, ಹರಳು ಹಾಗೂ ಆಭರಣಗಳ ರಫ್ತು ಇದಕ್ಕೆ ಪ್ರಮುಖ ಕಾರಣ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ ರಫ್ತು 22 ಶತಕೋಟಿ ಡಾಲರ್ ಆಗಿತ್ತು. 2019ರ ಜೂನ್‌ನಲ್ಲಿ 25 ಶತಕೋಟಿ ಡಾಲರ್ ಸರಕು ರಫ್ತು ಮಾಡಲಾಗಿತ್ತು. 2021ರ ಜೂನ್‌ನಲ್ಲಿ ಆಮದು ಶೇ.9633ರಷ್ಟು ಹೆಚ್ಚಾಗಿ 41.86 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಕಳೆದ ವರ್ಷ ಜೂನ್‌ನಲ್ಲಿ ಆಮದು 21.32 ಶತಕೋಟಿ ಡಾಲರ್ ಆಗಿತ್ತು. ಒಟ್ಟಾರೆ ತಿಂಗಳಲ್ಲಿ ವಿನಿಮಯ ಕೊರತೆ 9.4 ಶತಕೋಟಿ ಡಾಲರ್ ಆಗಿದೆ.

## 8, 9ರಂದು ದೂಡಾ ವ್ಯಾಪ್ತಿಯ ಅನಧಿಕೃತ ಬಡಾವಣೆಗಳ ತೆರವು

### ಪೊಲೀಸ್ ಬಂದೋಬಸ್ತ್ ಒದಗಿಸಲು ಎಸ್ಪಿಗೆ ದೂಡಾ ಅಧ್ಯಕ್ಷ ಶಿವಕುಮಾರ್ ಮನವಿ



ದಾವಣಗೆರೆ, ಜು. 2- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸಲು ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಗುರುವಾರ ನಡೆದ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ದೂಡಾ ಹಾಗೂ ಪಾಲಿಕೆ ವ್ಯಾಪ್ತಿಯ ಯರಗುಂಟೆ, ಕರೂರು ಮತ್ತು ದೊಡ್ಡ ಬೂದಿಹಾಳು ಗ್ರಾಮಗಳ ಕಂದಾಯ ಭೂಮಿಯಲ್ಲಿ ಅನಧಿಕೃತ ಬಡಾವಣೆಗಳು ನಿರ್ಮಾಣವಾಗುತ್ತಿದ್ದು, ಅನಧಿಕೃತ ಬಡಾವಣೆಗಳ ನಿರ್ಮಾಣವನ್ನು ತಡೆ ಗಟ್ಟಲು ಅಥವಾ ತೆರವುಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು.

ಈಗಾಗಲೇ ಅನಧಿಕೃತವಾಗಿ ಬಡಾವಣೆ ನಿರ್ಮಿಸಬಾರದು ಎಂದು ಸೂಚಿಸಿದ್ದರೂ ಕೆಲವರು ಸರ್ಕಾರಕ್ಕೆ ವಂಚನೆ ಮಾಡಿ ಅನಧಿಕೃತ ಬಡಾವಣೆ ನಿರ್ಮಾಣ ಮಾಡಿರುವುದು ಕಂಡು ಬಂದಿರುತ್ತದೆ. ಈ ರೀತಿ ಅನಧಿಕೃತ ಬಡಾವಣೆ ಮಾಡಿರುವುದರಿಂದ ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕವು ಸುಮಾರು ಒಂದು ಎಕರೆಗೆ ರೂ. 60 ಲಕ್ಷಗಳು ನಷ್ಟವಾಗುತ್ತದೆ ಹಾಗೂ ಅನಧಿಕೃತ ಬಡಾವಣೆ ನಿರ್ಮಾಣ ಮಾಡುವಾಗ ರಸ್ತೆ ಉದ್ಯಾನವನ, ನಾಗರೀಕ ಸೌಲಭ್ಯ ನಿವೇಶನಗಳನ್ನು ನಿಯಮಾವಳಿ ಪ್ರಕಾರ ಬಿಡದೇ ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದಾರೆ.

ಪ್ರಾಧಿಕಾರಕ್ಕೆ ಮತ್ತು ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕವನ್ನು ಪಾವತಿಸದೇ ರಿಯಲ್ ಎಸ್ಟೇಟ್ ನವರು ಲಾಭ ಪಡೆಯಲು ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ. ಹಾಗಾಗಿ ಅನಧಿಕೃತ ಬಡಾವಣೆಯಿಂದ (3ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 155 ಅಡಿ
ಒಳ ಹರಿವು: 1557 ಕ್ಯೂಸೆಕ್ಸ್
ಹೊರ ಹರಿವು : 80 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 139.5 ಅಡಿ


**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮೀಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409


## ಗರ್ಭಿಣಿಯರಿಗೆ ಲಸಿಕೆ ಅನುಮತಿ

ನವದೆಹಲಿ, ಜು. 2 – ದೇಶದ ಗರ್ಭಿಣಿ ಮಹಿಳೆಯರು ಕೊರೊನಾ ಲಸಿಕೆ ಪಡೆಯಬಹುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಅನುಮತಿ ನೀಡಿದೆ. ಲಸಿಕೆ ಕುರಿತಾದ ಎನ್.ಟಿ.ಎ.ಜಿ.ಐ. ಸಮಿತಿ ನೀಡಿದ ಶಿಫಾರಸ್ಸು ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಗರ್ಭಿಣಿಯರು ಕೊರೊನಾ ಲಸಿಕಾ ಕೇಂದ್ರಕ್ಕೆ ನೇರವಾಗಿ ತೆರಳಿ ಇಲ್ಲವೇ ಕೊವಿನ್ ವೆಬ್ ತಾಣದಲ್ಲಿ ನೋಂದಣಿ ಮಾಡುವ ಮೂಲಕ ಲಸಿಕೆ ಪಡೆಯಬಹುದಾಗಿದೆ.

ಈ ಬಗ್ಗೆ ಎಲ್ಲಾ ರಾಜ್ಯಗಳಿಗೆ ಸೂಚನೆ ರವಾನಿಸಲಾಗಿದೆ. ಇದುವರೆಗೂ ಗರ್ಭಿಣಿಯರನ್ನು ಹೊರತು ಪಡಿಸಿ 18 ವರ್ಷ ಮೀರಿದ ಎಲ್ಲರೂ ಲಸಿಕೆಗೆ ಅರ್ಹರಾಗಿದ್ದರು.

## 63 ಪಾಸಿಟಿವ್, 1 ಸಾವು, 272 ಗುಣ

ದಾವಣಗೆರೆ, ಜು. 2 – ಜಿಲ್ಲೆಯಲ್ಲಿ ಶುಕ್ರವಾರ 63 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಓರ್ವ ಪುರುಷ ಮೃತಪಟ್ಟಿದ್ದಾರೆ. 272 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. (2ನೇ ಪುಟಕ್ಕೆ)


**ಜಯದೇವಯ್ಯ ಹಂಜಗಿಮಠ್ ನಿಧನ**



ದಾವಣಗೆರೆ ಶ್ರೀನಿವಾಸ್‌ನಗರ, 10ನೇ ಕ್ರಾಸ್ ವಾಸಿ

**ಹೆಚ್. ಎಂ. ಜಯದೇವಯ್ಯ**

ಇವರು ದಿನಾಂಕ : 02.07.2021 ರ ಶುಕ್ರವಾರ ಮಧ್ಯಾಹ್ನ 1.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು.ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 03.07.2021ರ ಶನಿವಾರ ಬೆಳಿಗ್ಗೆ 10.00 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಫೋ : 97422 78068, 99862 40040



**ಭಾವಪೂರ್ಣ ಶ್ರದ್ಧಾಂಜಲಿ**



**ಶ್ರೀ ಎ. ಕೆ. ಪಾಪಯ್ಯನವರು**
ಅಧ್ಯಕ್ಷರು
ಶ್ರೀ ದೇವರಾಜ್ ಅರಸ್ ವಿದ್ಯಾಸಂಸ್ಥೆ, ಚಿತ್ರದುರ್ಗ.
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ದಿನಾಂಕ : 01/07/2021 ರ ಸಂಜೆ ದೈವಾಧೀನರಾಗಿರುತ್ತಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗು ಅವರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುವಾ...

* ಆಡಳಿತ ಮಂಡಳಿ * ಎಸ್. ಎಲ್. ಪದವಿ ಪೂರ್ವ ಕಾಲೇಜು
* ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು
* ಮಾನಸ ಪ್ಯಾರಾ ಮೆಡಿಕಲ್ ಕಾಲೇಜು
* ಶ್ರೀ ಡಿ. ಮಂಜುನಾಥ ಪದವಿ ಪೂರ್ವ ಕಾಲೇಜು, ದಾವಣಗೆರೆ.
* ಶ್ರೀ ಎಸ್.ಎಸ್.ಎಂ.ಸಿ.ಕೆ. ಕಾಲೇಜ್, ಅರಸೀಕೆರೆ.
* ಶ್ರೀ ದೇವರಾಜ ಅರಸ್ ಪದವಿ ಪೂರ್ವ ಕಾಲೇಜು, ಜಗಳೂರು.
* ಶ್ರೀ ನೀಲಕಂಠಯ್ಯ ಮೆಮೋರಿಯಲ್ ಪದವಿ ಪೂರ್ವ ಕಾಲೇಜು, ಚಿತ್ರದುರ್ಗ.

ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು

**ಮನೆ ಭೋಗ್ಯಕ್ಕಿದೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ 'ಎ' ಬ್ಲಾಕ್‌ನಲ್ಲಿ ಕಟ್ಟಿರುವ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ಕಾರ್ ಪಾರ್ಕಿಂಗ್, ಲಿಫ್ಟ್ ಸೌಕರ್ಯ, ನೀರಿನ ಸೌಕರ್ಯವಿದ್ದು, ವಾಸ್ತು ಪ್ರಕಾರವಿರುವ ಮನೆ ಭೋಗ್ಯಕ್ಕಿದೆ. ಸಂಪರ್ಕಿಸಿ :
ಮೊ. 96322 67555

**ಮನೆ ಅಡುಗೆ, ಹಳ್ಳಿ ಊಟ**
ಮನೆಯಲ್ಲಿ ತಯಾರಿಸಿದ ಶುದ್ಧ ಸಸ್ಯಹಾರಿ ತಿಂಡಿ, ಊಟ ದೊರೆಯುತ್ತದೆ. ನಿಮ್ಮ ಮನೆಗೇ ತಲುಪಿಸಲಾಗುವುದು. ಕರೆ ಮಾಡಿ.
63635 43487

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್.ಬಿ ಬ್ಲಾಕ್ ಪೂರ್ವ 30x40 ಡುಪ್ಲೆಕ್ಸ್, ಉತ್ತರ 30x55 ಡುಪ್ಲೆಕ್ಸ್, ಬಾಲಾಜಿ ಲೇಔಟ್ 30x50 ದಕ್ಷಿಣ ಮೇಲೆ ಎರಡು ಮನೆ ಮತ್ತೆ ಮೇಲೆ ರೂಂ, ದಕ್ಷಿಣ 30x40 ಮೇಲೆ ಮತ್ತು ಒಂದು ರೂಂ, ಎಂ.ಸಿ.ಸಿ. ಎ ಬ್ಲಾಕ್ ಪಶ್ಚಿಮ 35x50 ಮತ್ತೆ ಮೇಲೆ ಒಂದು ರೂಂ ಹಾಗೂ ಮನೆಗಳು ತೆಗೆದುಕೊಳ್ಳುವುದಕ್ಕೆ, ಕೊಡುವುದಕ್ಕೆ. ಸಂಪರ್ಕಿಸಿ
ಐಗೂರು ವಿಜಯ್ ಕುಮಾರ್
99457 02495

**ಸೈಟು ಮಾರಾಟಕ್ಕೆ (ಉತ್ತರ)**
ಶಾಮನೂರು ಡಾಲರ್ಸ್ ಕಾಲೋನಿ (ಮನೆ ಕಟ್ಟಲು ತುಂಬಾ ಚೆನ್ನಾಗಿದೆ) 40x58 ಉತ್ತರ.
ಬೂಸ್ನೂರ್ ಕಿರಣ್ (ಏಜೆಂಟ್)
(ನೇರವಾಗಿ ರಿಜಿಸ್ಟರ್ ಮಾಲೀಕರಿಂದ ಹಾಗೂ ಕೇವಲ ಅರ್ಧ ಪರ್ಸೆಂಟ್ (1/2%) ಕಮೀಷನ್ ಗೆ)
ಆಫೀಸ್ ನಂ. 97315-63409, 98440-63409

**ಕಾಂಪ್ಲೆಕ್ಸ್ ಮಾರಾಟಕ್ಕಿವೆ**
ಕೆ.ಆರ್.(ತರಕಾರಿ) ಮಾರ್ಕೆಟ್ ದಕ್ಷಿಣ 30x40, ತ್ರಿಶೂಲ್ ಟಾಕೀಸ್ ರಸ್ತೆ ದಕ್ಷಿಣ 15x30, ಹಳೇ ಬಸ್‌ನಿಲ್ದಾಣ ಉತ್ತರ 18x30
ಸಂಪರ್ಕಿಸಿ
ಐಗೂರು ವಿಜಯ್ ಕುಮಾರ್
99457 02495

**ಸೈಟ್‌ಗಳು ಮಾರಾಟಕ್ಕಿವೆ**
ಶಿವಪಾರ್ವತಿ ಪೂರ್ವ 30x40, 30x50, 40x60, ಪಶ್ಚಿಮ 30x46, ಜೆ.ಎಚ್. ಪಟೇಲ್ ಬಡಾವಣೆ 30x50, ಪಶ್ಚಿಮ 30x40, ಎಸ್.ಎಸ್. ಬಿ ಬ್ಲಾಕ್ ಪೂರ್ವ 40x60(ಕಾರ್ನರ್) ಉತ್ತರ 30x43 ಹಾಗೂ ಸೈಟ್‌ಗಳು ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ. ಸಂಪರ್ಕಿಸಿ
ಐಗೂರು ವಿಜಯ್ ಕುಮಾರ್
99457 02495

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
ಶ್ರೀ ಮಲ್ಲೇಶಣ್ಣ ಅರಕೇರಿ ರಾಣೇಬೆನ್ನೂರು
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ಪಶ್ಚಿಮ 30x45, ಪೂರ್ವ 30x40 ಕೆಳಗೆ ಮನೆ ಮೇಲೆ ಮನೆ ಮತ್ತು ಒಂದು ರೂಂ, ಉತ್ತರ 30x40 ಡಬ್ಬಲ್ ಡುಪ್ಲೆಕ್ಸ್, ಪಶ್ಚಿಮ 30x40 ಡಬಲ್ ಡುಪ್ಲೇಕ್ಸ್ ಎಸ್.ಎಸ್.ಹೈಟೆಕ್ ಉತ್ತರ 30x50, ಭೂಮಿಕಾ ನಗರ ದಕ್ಷಿಣ 30x20(ಮೇಲೆ ಕೆಳಗೆ) ಹಾಗೂ ಮನೆಗಳು ತೆಗೆದುಕೊಳ್ಳುವುದಕ್ಕೆ, ಕೊಡುವುದಕ್ಕೆ. ಸಂಪರ್ಕಿಸಿ
ಐಗೂರು ವಿಜಯ್ ಕುಮಾರ್
99457 02495

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬೇಕಾಗಿದ್ದಾರೆ**
ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
(ಭೇಟಿ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5.30)
08192-254736

**MCC 'A' 'B' ಸೈಟ್, ಮನೆ ಮಾರಾಟಕ್ಕೆ**
P.J. Extn., MCC 'A' 35×50, 20×70, 60×50, 30×80 ಸೈಟ್, MCC 'B' 40×60 ಸೈಟ್, ಮನೆ.
ಆಂಜನೇಯ : 30×40 (N F) SS A & B ಸೈಟ್ 40×60, Dollers ಸೈಟ್‌ಗಳು.
7676558585 Veeresh

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಕುರಿ-ಮೇಕೆಗಳು ಮಾರಾಟಕ್ಕಿವೆ**
ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರಿನ ಶಿವಕುಳೇನೂರಿನಲ್ಲಿರುವ ರತ್ನಮ್ಮ ಕಮಲಪ್ಪನವರ ಕುರಿ, ಮೇಕೆ ಮತ್ತು ನಾಟಿ ಕೋಳಿ ಫಾರ್ಮ್ ನಲ್ಲಿ ಎಲ್ಲಾ ತಳಿಯ ಉತ್ತಮ ಕುರಿಗಳು ಮತ್ತು ಮೇಕೆಗಳು ಮಾರಾಟಕ್ಕೆ ಸಿಗುತ್ತವೆ. ಸಂಪರ್ಕಿಸಿ :
7411001179, 9743750511

**ಮಾರಾಟಕ್ಕಿದೆ**
Tractor ಮಾರಾಟಕ್ಕೆ ಇದೆ
Messey Fergusin MF241 (42HP) 2019 Model, 2 Engine, 1Trailor
97319 99977
88842 28109

**ಮಹಿಳೆ ಬೇಕಾಗಿದ್ದಾರೆ**
ಪ್ರತಿದಿನ ಸಂಜೆ 5.30ರಿಂದ ಬೆಳಿಗ್ಗೆ 8.30ರವರೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. *ಸಂಪರ್ಕಿಸಿ:*
63639-54459

**REQUIRED**
Librarian, Office clerk with good knowledge of Graphics Design, M.S office, Faculty for Commerce Department.
Mail your Resume
vijayms555@gmail.com
Vijay M.S: 74065 50722

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್ ವೇರ್ & ಪೈಂಟ್ಸ್
(Harsha Hardware & Paints)
ಸುಭಾಷ್ ರಸ್ತೆ ,ಅಶೋಕ ಚಿತ್ರ ಮಂದಿರದ ಎದುರು, ರೈಲ್ವೇ ಗೇಟ್ ಬಳಿ, ದಾವಣಗೆರೆ - 577 001

**ಮನೆ ಬಾಡಿಗೆಗೆ ಇದೆ. ವಿಚಾರಿಸಿ**
ಡಿ.ಸಿ.ಎಂ. ಟೌನ್‌ಷಿಪ್, 6ನೇ ಮೇನ್, 4ನೇ ಕ್ರಾಸ್‌ನಲ್ಲಿ ಎರಡು ಬೆಡ್‌ರೂಂನ ಮನೆ ಬಾಡಿಗೆಗೆ ಇದೆ. ವಿಚಾರಿಸಿ.
RO ವಾಟರ್ ಪ್ಲಾಂಟ್ ಹತ್ತಿರ
ಮೊ: 97401 11769

**ತಕ್ಷಣ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ದಾವಣಗೆರೆಯಲ್ಲಿ ವಾಸಿಸುವವರಿಗೆ ಮಾತ್ರ.
ಶ್ರುತಿ ಗಾರ್ಮೆಂಟ್ಸ್, ಅಶೋಕ ರಸ್ತೆ, ಶಾಂತಿ ಪಾರ್ಕ್ ಹತ್ತಿರ, ದಾವಣಗೆರೆ.
ಮೊ. 63606-56001, 70228-43120

**ದಾವಣಗೆರೆಯ ವಿದ್ಯಾನಗರದಲ್ಲಿ ದೇವಸ್ಥಾನ, ಪಾರ್ಕ್ ಹಾಗೂ ಬಸ್‌ಸ್ಟಾಪ್‌ಗೆ ಹತ್ತಿರ ಇರುವ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇವೆ.**
ಮೊ. 96322 74557

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. *ಸಂಪರ್ಕಿಸಿ:*
63639-54459

**HOUSE FOR RENT**
Independent House for rent / lease at 3rd main road, MCC 'A' block, Davangere
99454 23613
80883 44383

**ಹೊಸ ಗೋಡೌನ್ ಮಳಿಗೆ ಬಾಡಿಗೆಗೆ ಇದೆ**
ಉತ್ತಮ ಸೌಕರ್ಯವಿರುವ ಹೊಸ ಗೋಡೌನ್ ಮಳಿಗೆ ಬಾಡಿಗೆಗೆ ಇದೆ. D.No. 818/2, ಚೌಡೇಶ್ವರಿ ದೇವಸ್ಥಾನದ ಹತ್ತಿರ, ಶ್ರೀ ಮಲ್ಲಿಕಾರ್ಜುನ ಸಾಮಿಲ್ ಎದುರುಗಡೆ, ಬಂಬೂಬಜಾರ್, ದಾವಣಗೆರೆ-577 001. ಅಳತೆ : ಉದ್ದ- 56 ಅಡಿ, ಉತ್ತರ-ದಕ್ಷಿಣ, ಅಗಲ - 18.50 ಅಡಿ (ಪೂರ್ವ-ದಕ್ಷಿಣ) ಉತ್ತರಕ್ಕೆ ರಸ್ತೆ, Contact No. :
9448667287, 7676269313

**ಮನೆ ಬಾಡಿಗೆಗೆ ಇದೆ**
ದೇವರಾಜ ಅರಸು ಬಡಾವಣೆ, 'ಸಿ' ಬ್ಲಾಕ್, 1ನೇ ಕ್ರಾಸ್, ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರ, ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. (2ನೇ ಮಹಡಿ) ನಲ್ಲಿ ನೀರು ಮತ್ತು ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ. ವಿಚಾರಿಸಿ
ಮೊ. 98458 40604
99805 32781

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ಹತ್ತಿರ, 1BHK ಮನೆ ಮತ್ತು 1 ರೂಂ ಬಾಡಿಗೆಗೆ ಇದೆ (ಸಸ್ಯಹಾರಿಗಳಿಗೆ ಮಾತ್ರ)
94499 42404
79751 07721

**ಮನೆ ಮಾರಾಟಕ್ಕಿದೆ**
1200Sq.ft ಕಾರ್ನರ್ ಮನೆ, ಹೊಂಡದ ಮೇನ್ ರೋಡ್, ಸುರಭಿ ಕ್ಲಿನಿಕ್ ಪಕ್ಕ, 3 ಅಂತಸ್ತಿನ ಮನೆ ಮಾರಾಟಕ್ಕಿದೆ
99640 23807
79753 33605

**ಮನೆ ಬಾಡಿಗೆಗೆ ಇದೆ**
3ಬೆಡ್ ರೂಂ ಇರುವ ಗ್ರೌಂಡ್ ಫ್ಲೋರ್ ಮನೆ with Corporation & Borewell water, P.J Extension ,M.C.C 'A' block, 4th cross, next to Vinayak Hospital. Preferance for officials
98332 09777

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಲೇ ಔಟ್, 'ಬಿ' ಬ್ಲಾಕ್, 3ನೇ ಮೇನ್, ಡೋ.ನಂ. 2650/22, 1ನೇ ಫ್ಲೋರ್, 14 ಚದರ ಅಡಿಯ 2 BHK ಮನೆ ಬಾಡಿಗೆಗೆ ಇದೆ. 3 ಬಾತ್ ರೂಂ. ಸೋಲಾರ್ ಮತ್ತು ಕಾರ್ ಪಾರ್ಕಿಂಗ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ
99455 68859
97699 50949

**WANTED**
Sales Girls, Sales Man, Cleaning Staff
Contact
8762221697

# ಅಪ್ಪರ್ ತುಂಗಾ ಮೇಲ್ದಂಡೆ ಕಾಲುವೆಯಲ್ಲಿ ಶೀಘ್ರವೇ ನೀರು ಹರಿಸಲು ರೈತರ ಮನವಿ

ಹೊನ್ನಾಳಿ, ಜು.2- ಅಪ್ಪರ್ ತುಂಗಾ ಮೇಲ್ದಂಡೆ ಕಾಲುವೆ ವ್ಯಾಪ್ತಿಯ ರೈತರುಗಳ ಬೆಳೆಗೆ 10 ದಿನಗಳಿಂದ ಮಳೆ ಬರದ ಕಾರಣ ಜೋಳ, ಶೇಂಗಾ, ಎಲೆಬಳ್ಳಿ ಸೇರಿದಂತೆ, ಅನೇಕ ಬೆಳೆಗಳು ನೀರಿನ ಅಭಾವ ಎದುರಿಸುತ್ತಿದ್ದು, ಕಾಲುವೆಗೆ ಕೂಡಲೇ ನೀರು ಹರಿಸುವಂತೆ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರಿಗೆ ಮನವಿ ನೀಡಿ ಒತ್ತಾಯಿಸಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ದೊಡ್ಡೇರಹಳ್ಳಿ ನಾಗರಾಜಪ್ಪ, ಮಲವ ಗೊಪ್ಪ ಶಿವಮೊಗ್ಗ ಕಛೇರಿಯಲ್ಲಿ ಮನವಿ ನೀಡಿ ಮಾತನಾಡಿ, ಅಪ್ಪರ್ ತುಂಗಾ ಮುಖ್ಯ ಕಾಲುವೆ ವ್ಯಾಪ್ತಿಯ ಹಳ್ಳಿಯ ರೈತರ ಬೆಳೆಗಳಿಗೆ ನೀರಿನ ಸಮಸ್ಯೆಯಾಗಿದ್ದು, ತುಂಗಭದ್ರಾ ನದಿಗೆ ವ್ಯರ್ಥವಾಗಿ ನೀರು ಹರಿಬಿಡುವ ಬದಲು ಮುಖ್ಯ ಕಾಲುವೆಗೆ ನೀರು ಹರಿಸುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಹೇಳಿದರು.



**ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ: ಕಾಡಾ ಅಧ್ಯಕ್ಷರ ಭರವಸೆ**

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಅರಬಗಟ್ಟೆ ಕೆ.ಸಿ. ಬಸಪ್ಪ ಮಾತನಾಡಿ, ಮಳೆ ಅಭಾವದಿಂದ ಅನೇಕ ಬೆಳೆಗಳು ಒಣ ಗುತ್ತಿವೆ. ಕಾಲುವೆ ವ್ಯಾಪ್ತಿಯ ತಾಲ್ಲೂಕಿನ ಚೀಲೂರು, ಗೋಪಗೊಂಡನಹಳ್ಳಿ, ಕೂಂಕೊವಾ, ಅರಬಗಟ್ಟೆ, ಮಾದನಬಾವಿ ಹಿರೇಮಠ, ಸೊರಟೂರು, ಹತ್ತೂರು,

**ಹೊನ್ನಾಳಿ**

ಎರಳ್ಳಿ, ಮಾರಿಕೊಪ್ಪ, ಹನುಮ ಸಾಗರ ಹೊಳೆ ಹರಳಹಳ್ಳಿ ರೈತ ರುಗಳ ಬೆಳೆಗೆ ನಾಲೆಯಲ್ಲಿ ನೀರು ಹರಿಸುವುದರಿಂದ ಅನುಕೂಲದ ಜೊತೆಗೆ ಬೋರ್‌ಗಳಲ್ಲಿ ನೀರಿನ ಪ್ರಮಾಣ ಹೆಚ್ಚಲಿದೆ ಎಂದು ಅಭಿಪ್ರಾಯಪಟ್ಟರು.

ಸಂಘದ ಉಪಾಧ್ಯಕ್ಷ ಹೊಳೆಹರಳಹಳ್ಳಿ ಬಸವರಾಜಪ್ಪ, ರೈತ ಸಂಘದ ನ್ಯಾಮತಿ ತಾಲ್ಲೂಕು ಅಧ್ಯಕ್ಷ ಬೆಳಗುತ್ತಿ ಉಮೇಶಣ್ಣ ಮಾತನಾಡಿದರು.

ರೈತ ಮುಖಂಡ ಹಿರೇಮಠ ಬಸಣ್ಣ ಮಾತನಾಡಿ, ಕಾಡಾ ಅಧ್ಯಕ್ಷರು ಕಾಲುವೆಗೆ ನೀರು ಹರಿಸಲು 2 ದಿನಗಳ ಕಾಲಾವಕಾಶದಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ, ಶೀಘ್ರವೇ ನೀರು ಬಿಡುವುದಾಗಿ ತಿಳಿಸಿದ್ದು, 2 ದಿನಗಳ ನಂತರ ನೀರು ಬಿಡುವ ಭರವಸೆ ನೀಡಿರುವುದಾಗಿ ತಿಳಿಸಿದ್ದಾರೆ.

## ಸರ್ಕಾರ ಶ್ರೀಮಂತರ ಪರ

**(1ನೇ ಪುಟದಿಂದ)** ಕಾಪಾಡಿಕೊಳ್ಳಬೇಕು. ಎಷ್ಟೋ ಸಲ ಸಚಿವರ ಸಹಿಯನ್ನು ಅವರ ಪಿಎಗಳೇ ಮಾಡಿರು ತ್ತಾರೆ. ಹೀಗಾಗಿ, ಸಮಾಜ ಕಲ್ಯಾಣ ಇಲಾಖೆ ಸಚಿವರ ಆಪ್ತ ಸಹಾಯಕರಿಗೆ ಹಣ ವಸೂಲಿ ಮಾಡಲು ಹೇಳಿ ದವರು ಯಾರು ಎಂಬುದು ಗೊತ್ತಾಗಬೇಕು. ಈ ಬಗ್ಗೆ ಸರ್ಕಾರ ಸಮಗ್ರ ತನಿಖೆ ನಡೆಸಿ ಈಗ ಬಂಧಿಸಿರುವ ಸಚಿವರ ಪಿಎಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿದರು.

ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂಬ ಕಾರಣಕ್ಕೆ ಬೇರೆ ಪಕ್ಷದ ಶಾಸಕರು, ಅಧಿಕಾರಿಗಳು ನಮ್ಮನ್ನು ಈಗಿನಿಂದಲೇ ಚೆನ್ನಾಗಿ ಮಾತನಾಡಲಾರಂಭಿಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ. ಆದರೆ, ನಮ್ಮ ಮುಖಂಡರು ನಾಯಕತ್ವದ ಬಗ್ಗೆ ಗೊಂದಲ ಸೃಷ್ಟಿಸದೆ, ಕೊರೊನಾ ಸಂಕಷ್ಟದಲ್ಲಿ ಜನರ ಕಣ್ಣೀರು ಒರೆಸುವ ಕೆಲಸ ಮಾಡಬೇಕೆಂದರು.

ಈ ಸಂದರ್ಭದಲ್ಲಿ ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಪಂಚಾಯ್ತಿ ಸದಸ್ಯ ಕೆ.ಎಸ್. ಬಸವಂತಪ್ಪ ಸೇರಿದಂತೆ ಇತರರು ಇದ್ದರು.

## ದತ್ತು ಪಡೆಯಬಹುದು

**(1ನೇ ಪುಟದಿಂದ)** ಪಡೆಯಬಹುದು. ಈ ಪ್ರಕರಣದಲ್ಲಿ ಮಗುವಿನ ತಂದೆಯ ಸಹೋದರನೇ ದತ್ತು ಪಡೆದಿರುವುದರಿಂದ, ಕಾಯ್ದೆಯಲ್ಲಿ ಅವಕಾಶವಿದೆ ಎಂದು ಹೈಕೋರ್ಟ್ ಹೇಳಿದೆ.

## ರಾಣೇಬೆನ್ನೂರು ತಾಲ್ಲೂಕು ಪಂಚಾಯಿತಿ ಮೀಸಲಾತಿ

ರಾಣೇಬೆನ್ನೂರು, ಜು.2- ತಾಲ್ಲೂಕು ಪಂಚಾಯ್ತಿಯ 19 ಕ್ಷೇತ್ರಗಳಿಗೆ ಮೀಸಲಾತಿ ನಿಗದಿಪಡಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕಾಕೋಳ - ಅನುಸೂಚಿತ ಜಾತಿ, ಹನುಮಾಪುರ - ಅನುಸೂಚಿತ ಜಾತಿ (ಮಹಿಳೆ), ಚಳಗೇರಿ - ಸಾಮಾನ್ಯ, ಶ್ರೀನಿವಾಸಪುರ - ಅನುಸೂಚಿತ ಜಾತಿ (ಮಹಿಳೆ), ಕರೂರು - ಹಿಂದುಳಿದ ವರ್ಗ 'ಅ', ಮೆಡ್ಲೇರಿ - ಹಿಂದುಳಿದ ವರ್ಗ 'ಅ' ಮಹಿಳೆ, ಹರನಗಿರಿ - ಹಿಂದುಳಿದ ವರ್ಗ 'ಅ' ಮಹಿಳೆ, ತುಮ್ಮಿನಕಟ್ಟಿ - ಸಾಮಾನ್ಯ, ಕುಪ್ಪೇಲೂರು - ಸಾಮಾನ್ಯ ಮಹಿಳೆ, ಬಿಲ್ಲಳ್ಳಿ - ಸಾಮಾನ್ಯ, ಹಲಗೇರಿ - ಸಾಮಾನ್ಯ ಮಹಿಳೆ, ಇಟಗಿ - ಅನುಸೂಚಿತ ಪಂಗಡ, ಅಂತರವಳ್ಳಿ - ಸಾಮಾನ್ಯ ಮಹಿಳೆ, ಅಸುಂಡಿ - ಸಾಮಾನ್ಯ (ಮಹಿಳೆ), ಜೋಯಿಸರಹರಳಹಳ್ಳಿ - ಸಾಮಾನ್ಯ, ಹೂಲಿಹಳ್ಳಿ - ಸಾಮಾನ್ಯ (ಮಹಿಳೆ), ಕೋಡಿಯಾಲ - ಅನುಸೂಚಿತ ಪಂಗಡ (ಮಹಿಳೆ), ಕವಲೆತ್ತು - ಹಿಂದುಳಿದ ವರ್ಗ 'ಬ', ಹಿರೇಬಿದರಿ - ಸಾಮಾನ್ಯ.

## ಹರಪನಹಳ್ಳಿ ತಾ.ಪಂ. ಕ್ಷೇತ್ರಗಳ ಮೀಸಲಾತಿ ಪ್ರಕಟ

ಹರಪನಹಳ್ಳಿ, ಜು.2- ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಜಿಲ್ಲಾ ಪಂಚಾಯ್ತಿಯ 8 ಹಾಗೂ ತಾಲ್ಲೂಕು ಪಂಚಾಯ್ತಿಯ 21 ಕ್ಷೇತ್ರಗಳಿಗೆ ರಾಜ್ಯ ಸರ್ಕಾರ ಮೀಸಲಾತಿ ಪ್ರಕಟಿಸಿದೆ.

ಜಿಲ್ಲಾ ಪಂಚಾಯ್ತಿ ಅರಸಿಕೇರಿ ಕ್ಷೇತ್ರ ಎಸ್ಟಿ (ಮಹಿಳೆ), ಚಿಗಟೇರಿ ಸಾಮಾನ್ಯ, ಮಾಡ್ಲಗೇರಿ ಎಸ್ಸಿ(ಮಹಿಳೆ), ಮಾಚೀಹಳ್ಳಿ ಸಾಮಾನ್ಯ(ಮಹಿಳೆ), ತೆಲಗಿ ಎಸ್ಸಿ, ಹಲುವಾಗಲು ಸಾಮಾನ್ಯ, ಉಚ್ಚಂಗಿದುರ್ಗ ಸಾಮಾನ್ಯ(ಮಹಿಳೆ), ಹಿರೇಮೇಗಳಗೇರಿ ಸಾಮಾನ್ಯ ಅಭ್ಯರ್ಥಿಗೆ ಮೀಸಲಾಗಿದೆ.

ತಾಲ್ಲೂಕು ಪಂಚಾಯ್ತಿ ನಿಚ್ಚವ್ವನಹಳ್ಳಿ ಕ್ಷೇತ್ರ - ಎಸ್ಟಿ (ಮಹಿಳೆ), ತೌಡೂರು ಎಸ್ಸಿ, ಅರಸಿಕೇರಿ ಎಸ್ಟಿ, ಮತ್ತಿಹಳ್ಳಿ ಸಾಮಾನ್ಯ, ಚಿಗಟೇರಿ ಸಾಮಾನ್ಯ (ಮಹಿಳೆ), ಮುತ್ತಿಗೆ ಸಾಮಾನ್ಯ (ಮಹಿಳೆ), ಹಗರಿಗಜಾಪುರ ಸಾಮಾನ್ಯ, ನಂದಿಬೇವೂರು ಸಾಮಾನ್ಯ (ಮಹಿಳೆ) ಅಭ್ಯರ್ಥಿಗೆ ಮೀಸಲಾಗಿದೆ.

ಮಾಡ್ಲಗೇರಿ ಕ್ಷೇತ್ರ ಎಸ್ಸಿ (ಮಹಿಳೆ), ಕೆ. ಕಲ್ಲಹಳ್ಳಿ ಎಸ್ಸಿ, ಮಾಚಿಹಳ್ಳಿ ಎಸ್ಟಿ (ಮಹಿಳೆ), ಹಾರಕನಾಳು ಎಸ್ಸಿ, ತೆಲಿಗಿ ಸಾಮಾನ್ಯ, ಸೇವಾನಗರ ಸಾಮಾನ್ಯ, ಕಡತಿ ಸಾಮಾನ್ಯ, ಕುಂಚೂರು ಸಾಮಾನ್ಯ (ಮಹಿಳೆ), ಹಲುವಾಗಲು ಸಾಮಾನ್ಯ (ಮಹಿಳೆ), ಉಚ್ಚಂಗಿದುರ್ಗ ಎಸ್ಸಿ (ಮಹಿಳೆ), ಅಣಜಿಗೇರಿ ಎಸ್ಸಿ (ಮಹಿಳೆ), ಕಂಚಿಕೇರಿ ಸಾಮಾನ್ಯ (ಮಹಿಳೆ), ಹಿರೇಮೇಗಳಗೇರಿ ಕ್ಷೇತ್ರಕ್ಕೆ ಎಸ್ಟಿ ಮೀಸಲು ಇರಿಸಿದೆ ಎಂದು ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ಎಂ.ಪಿ. ರಂಜಿತಾ ಅಧಿಸೂಚನೆ ಹೊರಡಿಸಿದ್ದಾರೆ.

ಮೀಸಲಾತಿ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವುದಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಜುಲೈ 8ರೊಳಗೆ ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, 1ನೇ ಮಹಡಿ, ಕೆಎಸ್‌ಸಿಎಂಎಫ್ ಕಟ್ಟಡ (ಹಿಂಭಾಗ)ನಂ-8 ಕನ್ನಿಂಗ್‌ಹ್ಯಾಂ ರಸ್ತೆ ಬೆಂಗಳೂರು -560052 ಇಲ್ಲಿಗೆ ಸಲ್ಲಿಸಲು ಸೂಚಿಸಲಾಗಿದೆ.

ಈ ಹಿಂದೆ ಹರಪನಹಳ್ಳಿ ತಾಲ್ಲೂಕಿನಲ್ಲಿ 26 ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳು ಇದ್ದು, ಕ್ಷೇತ್ರಗಳ ಪುನರ್ ವಿಂಗಡಣೆ ನಂತರ 21ಕ್ಕೆ ಇಳಿಸಲಾಗಿದೆ.

## ನಗರದಲ್ಲಿ ಕಾಂಗ್ರೆಸ್‌ನಿಂದ ಪ್ರತಿಭಟನೆ

ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಸಮರ್ಪಕ ಲಸಿಕೆ ನೀಡಬೇಕೆಂದು ಆಗ್ರಹಿಸಿ, ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮುಂಭಾಗದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

## ಶಾಸಕ ರಾಮಪ್ಪ ಪುತ್ರಿ ವಿವಾಹಕ್ಕೆ ಸಿದ್ಧರಾಮಯ್ಯ



ಹರಿಹರ, ಜು.2- ಶಾಸಕ ಎಸ್. ರಾಮಪ್ಪ ಅವರ ಪುತ್ರಿ ಹಂಸಲತಾ ಹಾಗೂ ಹೃಷಿಕೇಶ್ ಅವರ ವಿವಾಹ ಮಹೋತ್ಸವವು ನಗರದ ಶ್ರೀ ಸಿದ್ದೇಶ್ವರ ಪ್ಯಾಲೇಸ್‌ನಲ್ಲಿ ಇಂದು ಸರಳವಾಗಿ ನಡೆಯಿತು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವರುಗಳಾದ ಎಸ್.ಎಸ್. ಮಲ್ಲಿಕಾರ್ಜುನ್, ಹೆಚ್. ಆಂಜನೇಯ, ಪಿ.ಟಿ. ಪರಮೇಶ್ವರನಾಯ್ಕ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಸೇರಿದಂತೆ ಹಲವು ಗಣ್ಯರು ವಿವಾಹ ಮಹೋತ್ಸವದಲ್ಲಿ ಪಾಲ್ಗೊಂಡು ನೂತನ ದಂಪತಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಶಾಸಕ ರಾಮಪ್ಪ, ಪತ್ನಿ ಜಯಮ್ಮ, ಮದುಮಗ ಹೃಷಿಕೇಶ್ ಅವರ ತಾಯಿ ಕೆ. ನಂದಾ, ಡಾ.ಕೆ. ಸಾಯಿಬಾಬಾ, ಯತಿರಾಜ್, ಪೂಜಾ ಹಾಗೂ ಗಣ್ಯರು, ರಾಜಕೀಯ ಧುರೀಣರು ಕುಟುಂಬದ ಸದಸ್ಯರು ಹಾಜರಿದ್ದರು.

**ಸಿದ್ದರಾಮಯ್ಯಗೆ ಜೈಕಾರ**

ಅಪಾರ ಪ್ರಮಾಣದಲ್ಲಿ ಸೇರಿದ್ದ ಸಿದ್ಧರಾಮಯ್ಯ ಅಭಿಮಾನಿಗಳು ಕೊರೊನಾ ರೋಗದ ಭಯ ಬಿಟ್ಟು ಹಸ್ತಲಾಘವ ಮಾಡಲು ಹೋದಾಗ ನೂಕು ನುಗ್ಗಲು ಹೆಚ್ಚಾಗಿ ಅಂತರವನ್ನು ಕಾಯ್ದುಕೊಳ್ಳುವಲ್ಲಿ ವಿಫಲರಾದರು. 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಜೈ ಜೈ' ಎಂದು ಅಭಿಮಾನಿಗಳು ಜೈಕಾರ ಹಾಕಿದರು.

## ಲಂಚ ಬಿಜೆಪಿಗೆ ಹೊಸದಲ್ಲ

**(1ನೇ ಪುಟದಿಂದ)** ಒತ್ತಾಯಿಸಿದ ಅಂಶಗಳನ್ನೇ ಸುಪ್ರೀಂ ಕೋರ್ಟ್ ಸಹ ಪ್ರಸ್ತಾಪಿಸಿದೆಯಲ್ಲದೇ, ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಸರ್ಕಾರ ಮಾತ್ರ ಈ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲ. ಇಷ್ಟೊಂದು ಪರಿಹಾರ ನೀಡಲು ಸಾಧ್ಯವಿಲ್ಲವೆಂದು ಸರ್ಕಾರ ಹೇಳುತ್ತಿದೆ ಎಂದು ಕಿಡಿಕಾರಿದರು.

ಮಾಜಿ ಸಿಎಂ ಕುಮಾರಸ್ವಾಮಿ ಹೇಳಿದ್ದೆಲ್ಲವೂ ವೇದ ವಾಕ್ಯನಾ. ಅವ್ರೇನೂ ನಮ್ಮ ಪಕ್ಷದವ್ರಾ. ಅವ್ರಿಗೂ ನಮಗೂ ಏನ್ ಸಂಬಂಧ. ಬೇಕು ಅಂತಾನೇ ಸುಳ್ಳು ಹೇಳ್ತಾರೆ. ಸಿಎಂ ವಿಚಾರಕ್ಕೆ ಸಂಬಂಧಿಸಿದಂತೆ ನಾವೆಲ್ಲಿ ಹೊಡೆದಾಡುತ್ತಿದ್ದೇವೆ ಎಂದು ಗುಡುಗಿದರು. ಈ ಸಂದರ್ಭದಲ್ಲಿ ಮಾಜಿ ಸಚಿವರುಗಳಾದ ಶಾಮನೂರು ಮಲ್ಲಿಕಾರ್ಜುನ್, ಹೆಚ್. ಆಂಜನೇಯ, ಪಿ.ಟಿ. ಪರಮೇಶ್ವರ ನಾಯ್ಕ ಸೇರಿದಂತೆ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು.

## 63 ಪಾಸಿಟಿವ್, 272 ಗುಣ

**(1ನೇ ಪುಟದಿಂದ)** ದಾವಣಗೆರೆ ತಾಲ್ಲೂಕಿನಲ್ಲಿ 17, ಹರಿಹರ 7, ಜಗಳೂರು 4, ಚನ್ನಗಿರಿ 20, ಹೊನ್ನಾಳಿಯ 6 ಜನ ಹಾಗೂ ಹೊರ ಜಿಲ್ಲೆಯ 9 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 1026 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 557 ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

## ರಾಜ್ಯಗಳಿಗೆ ಕೇಂದ್ರದ ತಂಡ

**(1ನೇ ಪುಟದಿಂದ)** ತಂಡಗಳನ್ನು ರವಾ ನಿಸಿದೆ. ರಾಜ್ಯಗಳು ಕೊರೊನಾ ನಿಯಂತ್ರಿಸಲು ತೆಗೆದುಕೊಳ್ಳುತ್ತಿರುವ ಕ್ರಮಗಳಿಗೆ ಈ ತಂಡಗಳು ನೆರವಾಗಲಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಹೇಳಿಕೆ ತಿಳಿಸಿದೆ.

## ಚಿರತೆ ಬಂಧಿಸಲು ಜಂಟಿ ಕಾರ್ಯಾಚರಣೆ

ಹರಿಹರ, ಜು.2- ತಾಲ್ಲೂಕಿನ ಚಿಕ್ಕಬಿದಿರೆ ಮತ್ತು ಸಾರಥಿ ಸುತ್ತಮುತ್ತಲಿನ ಗ್ರಾಮದ ಅಡಿಕೆ ತೋಟವೊಂದರಲ್ಲಿ ಬೀಡು ಬಿಟ್ಟಿದ್ದ ಕುರಿಗಾಹಿಗಳ ಕುರಿ ಹಿಂಡಿನ ಮೇಲೆ ಕಳೆದೆರಡು ದಿನಗಳ ಹಿಂದೆ ಚಿರತೆ ದಾಳಿ ನಡೆಸಿ ಕುರಿಯೊಂದನ್ನು ಕೊಂದು ಹಾಕಿದೆ.

ಚಿರತೆ ದಾಳಿಯಿಂದ ಚಿಕ್ಕಬಿದರಿ, ಸಾರಥಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಚಿರತೆ ಬಂಧನಕ್ಕೆ ಪೊಲೀಸ್ ಹಾಗೂ ಅರಣ್ಯ ಇಲಾಖೆಯಿಂದ ಜಂಟಿ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಗ್ರಾಮಕ್ಕೆ ಉಪ ವಲಯ ಅರಣ್ಯಾಧಿಕಾರಿ ಚಂದ್ರಶೇಖರ್ ಭೇಟಿ ನೀಡಿದ್ದ ವೇಳೆ ಮಾತನಾಡಿ, ಕುರಿಗಳ ಮೇಲೆ ದಾಳಿ ನಡೆಸಿರುವುದು ಚಿರತೆ ಎಂದು ಕಳೇಬರಹದ ಮೇಲಿನ ಹಲ್ಲಿನ ಗುರುತು ಹಾಗೂ ಪಾದಗಳ ಗುರುತುಗಳಿಂದ ಧೃಡಪಟ್ಟಿದೆ. ಸುರಕ್ಷತಾ ಕ್ರಮವಾಗಿ ಚಿರತೆ ಬಂಧನಕ್ಕೆ ಬೋನನ್ನು ಅಳವಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗುತ್ತೂರು ಗ್ರಾಮಾಂತರ ಠಾಣೆ ಪಿಎಸ್‌ಐ ಡಿ. ರವಿಕುಮಾರ್ ಮಾತನಾಡಿ, ಚಿಕ್ಕಬಿದಿರೆ ಗ್ರಾಮದಲ್ಲಿ ಎರಡು ದಿನಗಳ ಹಿಂದೆ ಚಿರತೆ ಕುರಿಗಳ ಮೇಲೆ ದಾಳಿ ನಡೆಸಿರುವ ಹಿನ್ನೆಲೆಯಲ್ಲಿ ಗ್ರಾಮಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಟಾಂ ಟಾಂ ಹೊಡೆಸಲಾಗಿದೆ. ಸುರಕ್ಷತೆಯ ಹಿನ್ನೆಲೆಯಲ್ಲಿ ಹಗಲು ಮತ್ತು ರಾತ್ರಿ ಬಂದೋಬಸ್ತ್‌ಗಾಗಿ ಸಿಬ್ಬಂದಿ ನೇಮಿಸಲಾಗಿದೆ ಎಂದು ತಿಳಿಸಿದರು.

ಸಾರಥಿ ಪಿಡಿಓ ರಾಘವೇಂದ್ರ ಮಾತನಾಡಿ ಸಾರಥಿ, ಚಿಕ್ಕಬಿದರಿ ಸೇರಿದಂತೆ ಸುಮಾರು 1,000 ಎಕರೆ ಪ್ರದೇಶವು ಗುಡ್ಡಗಾಡಿನಿಂದ ಕೂಡಿದೆ. ಗುಡ್ಡಗಾಡು ಪ್ರದೇಶದಲ್ಲಿ ಸಾರ್ವಜನಿಕರು ಮತ್ತು ಕುರಿಗಾಹಿಗಳು ತೆರಳದಂತೆ ತಿಳಿಸಲಾಗಿದೆ. ದುಗ್ಗತ್ತಿ ಸಕ್ಕರೆ ಕಾರ್ಖಾನೆಯ ಹಿಂಬದಿಯ ರಸ್ತೆಯಲ್ಲಿ ಕಾಣಿಸಿಕೊಂಡಿತ್ತು ಎಂದು ಗ್ರಾಮಸ್ಥರು ಹೇಳಿದ್ದರಿಂದ ಆ ಸ್ಥಳದಲ್ಲಿಯೂ ಓಡಾಡದಂತೆ ತಿಳಿಸಲಾಗಿದೆ. ಹರಪನಹಳ್ಳಿ ಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶ ಇರುವುದರಿಂದ, ಆ ಭಾಗದಿಂದ ಬಂದಿರಬಹುದು ಎಂದು ಊಹಿಸಲಾಗಿದ್ದು, 2-3 ದಿನಗಳಲ್ಲಿ ಚಿರತೆಯನ್ನು ಸೆರೆಹಿಡಿದು ಅರಣ್ಯ ಇಲಾಖೆಯ ವಶಕ್ಕೆ ಒಪ್ಪಿಸಲು ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.



**ಹರಿಹರ**

ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿ ಕರಿಯಪ್ಪ, ಕೃಷ್ಣ, ಅರಣ್ಯ ರಕ್ಷಕ ವೆಂಕಟೇಶ್, ಅರಣ್ಯ ವೀಕ್ಷಕರಾದ ಸುರೇಶ್, ಬಸವರಾಜ್ ಹಾಗೂ ಇತರರು ಭಾಗವಹಿಸಿದ್ದರು.

**Room For Rent**
Single Room attached bath room 14x14 ft, 2nd floor, 4th Main, 9th cross, P.J. Extenstion Davanagere
94489 29509

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು
ದಿ. 07.07.2021ರ ಬುಧವಾರ ಮತ್ತು 08.07.2021ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಲೇ ಔಟ್, ಬಿ ಬ್ಲಾಕ್, 4ನೇ ಮುಖ್ಯರಸ್ತೆ, 10ನೇ ಅಡ್ಡ ರಸ್ತೆಯಲ್ಲಿ ಮುನ್ಸಿಪಲ್ ಹಾಗೂ ಬೋರ್ ನೀರಿನ ವ್ಯವಸ್ಥೆ ಇರುವ 3 ಬೆಡ್ ರೂಂನ ಮನೆ ಬಾಡಿಗೆಗಿದೆ.
98442 01186

ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮಾರಾಟಕ್ಕಿದೆ**
ರವೀಂದ್ರನಾಥ ಬಡಾವಣೆ, ಸರ್ಕ್ಯೂಟ್ ಹೌಸ್ ಹತ್ತಿರ, 30x50 ಉತ್ತರ
ಸಂಪರ್ಕಿಸಿ
88678 22669
80882 04909

**ಸೈಟು ಮಾರಾಟಕ್ಕಿದೆ**
ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತದಲ್ಲಿ ಮುಖ್ಯ ರಸ್ತೆಗೆ 55x40 ಅಳತೆಯ ದಕ್ಷಿಣ ಮತ್ತು ಪಶ್ಚಿಮ ರಸ್ತೆ ಇರುವ ಸಂಜೀವಿನಿ ಆಂಜನೇಯ ದೇವಸ್ಥಾನದ ರಸ್ತೆ, 7ನೇ ಕ್ರಾಸ್, ಕಾರ್ನರ್ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
94483 73997, 97318 25700

**ಬೇಕಾಗಿದ್ದಾರೆ**
B.Sc ಅಗ್ರಿ ಆಗಿರುವವರು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
ಸಂಪರ್ಕಿಸಿರಿ :
99000 88655

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ
94803 43063

**ಬೇಕಾಗಿದ್ದಾರೆ**
ಗ್ರಾಫಿಕ್ ಡಿಸೈನರ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಫುಲ್ ಟೈಮ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
9739192779

**ನಿವೇಶನಗಳು ಮಾರಾಟಕ್ಕಿವೆ**
ಆವರಗೆರೆ ಉತ್ತಮ್‌ಚಂದ್ ಬಡಾವಣೆ ಇಲ್ಲಿ ಉತ್ತರ-ಪೂರ್ವ ಕಾರ್ನರ್ 25×49, ಉತ್ತರ - 40×65, ದಕ್ಷಿಣ 30×60
ಸಂಪರ್ಕಿಸಿ: 99803 79361
80731 78139

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟಿ ರಿ.ಸ.ನಂ 7/16 ರಲ್ಲಿ 17 ಗುಂಟೆ ಜಮೀನು ಮಾರಾಟಕ್ಕಿದೆ. ಮೇನ್ ರೋಡ್ ಪಕ್ಕ ಶ್ಯಾಮನೂರಿನಿಂದ 3 ಕಿಲೋ ಮೀಟರ್, ಮಿಟ್ಲಕಟ್ಟೆ
98443 60459, 87220 14318
95352 69849

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
ಹದಡಿ-ಕುರ್ಕಿ
74112 50447

**ಬೇಕಾಗಿದ್ದಾರೆ**
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ / ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ. ಆಸಕ್ತರು ಸಂಪರ್ಕಿಸಿ
99167 01303

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗದ ಸಿದ್ದಗಂಗಾ ಬಡಾವಣೆಯಲ್ಲಿ ನೂತನವಾಗಿ ಕಟ್ಟಿಸಿರುವ 30x33 ಅಳತೆಯ 2 ಬೆಡ್ ರೂಂ ಮನೆ ಮಾರಾಟಕ್ಕಿದೆ. ಮಹಡಿ ಮೇಲೆ ಬಾಡಿಗೆಗೆ ಬರುವಂತಹ ಎರಡು ಪ್ರತ್ಯೇಕ ಕೊಠಡಿಗಳಿವೆ.
94820 94979

**ಶ್ರೀ ದಿವ್ಯ ಹೀಲಿಂಗ್ಸ್**
ಉದ್ಯೋಗ, ವ್ಯವಹಾರ, ಹಣಕಾಸಿನ ಸಮಸ್ಯೆ, ವಾಸಿಸುವ ಮತ್ತು ಕಟ್ಟುತ್ತಿರುವ ಮನೆ ವಾಸ್ತು, ವಧು-ವರರ ಹೊಂದಾಣಿಕೆ ತಿಳಿಯಲು, ಇಂದೇ ಸಂಪರ್ಕಿಸಿ :
99726 00713

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಪ್ರವೇಶ ಪ್ರಕಟಣೆ 2020-21**
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಕಾಶೀಪುರದ ಗೌಡ್ರು ವಾಗೀಶಪ್ಪ ನಿಧನ**



ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ದಿ|| ಪಟೇಲ್ ಚಂದ್ರಪ್ಪ ಅವರ ಜೇಷ್ಠ ಪುತ್ರ ಗೌಡ್ರು ಶ್ರೀ ಕೆ.ಎಸ್. ವಾಗೀಶಪ್ಪ ಅವರು ದಿನಾಂಕ 2.7.2021ರ ಶುಕ್ರವಾರ ರಾತ್ರಿ 8.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಸಹೋದರರು, ಅಳಿಯಂದಿರು, ಸೊಸೆಯಂದರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.07.2021ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಕಾಶೀಪುರ ಗ್ರಾಮದಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಮೊ. 99168 36394

|| ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ||
**ವೈಕುಂಠ ಸಮಾರಾಧನೆ ಆಹ್ವಾನ**



ಶ್ರೀಮತಿ ಚನ್ನಬಸಮ್ಮನವರು
ಕೋಡಿಹಳ್ಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 19.06.2021ನೇ ಶನಿವಾರದಂದು ನನ್ನ ಪೂಜ್ಯ ಪತಿಯಾದ
ತಿಪ್ಪಯ್ಯನವರು
ನಿವೃತ್ತ ಕೆ.ಪಿ.ಟಿ.ಸಿ.ಎಲ್.
ಇವರು ದೈವಾಧೀನರಾದ ಪ್ರಯುಕ್ತ ಇವರ
'ವೈಕುಂಠ ಸಮಾರಾಧನೆ' ಯನ್ನು
ದಿನಾಂಕ : 04.07.2021 ರ ಭಾನುವಾರ ಬೆಳಿಗ್ಗೆ ಕೋಡಿಹಳ್ಳಿ ಗ್ರಾಮದಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖಿತಪ್ತರು : ಧರ್ಮಪತ್ನಿ : ಶ್ರೀಮತಿ ಚನ್ನಬಸಮ್ಮನವರು
ಧನಂಜಯ, ಕೆ.ಪಿ.ಟಿ.ಸಿ.ಎಲ್, ಶ್ರೀಮತಿ ಸಾವಿತ್ರ ಮಲ್ಲಿಕಾರ್ಜುನ್
ಶ್ರೀಮತಿ ಲಲಿತ ಕುಮಾರಸ್ವಾಮಿ, ಶ್ರೀಮತಿ ಶಿಲ್ಪ ಹೇಮಂತ
ಶ್ರೀಮತಿ ದೀಪಾ ಸತೀಶ್, ಶ್ರೀಮತಿ ಛಾಯಾ ಹೊನ್ನೂರಪ್ಪ
ಮೊಮ್ಮಕ್ಕಳಾದ : ಕುಶಾಲ್‌ಕುಮಾರ್, ಲಿಖಿತಾ, ಭರತ್‌ಕುಮಾರ್, ನಿಖಿಲ್, ಐಶ್ವರ್ಯ, ಅಖಿಲೇಶ್, ಮೋಹಿತ್, ಸಾಮ್ರಾಟ್, ರಘುದೀಕ್ಷಿತ್, ವಿಷ್ಣು ರಾಹುಲ್
ಮಾಳಗಿಮನೆ ವಂಶಸ್ಥರು ಹಾಗೂ ಬಂಧು-ಮಿತ್ರರು.
ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಶಾಮನೂರಿನ ಓಬಜ್ಜಿ ಸಣ್ಣ ಹನುಮಂತಪ್ಪ ನಿಧನ**



ದಾವಣಗೆರೆ ಸಿಟಿ ಶಾಮನೂರು ವಾಸಿ ಅಂಬೇಡ್ಕರ್ ಭಜನಾ ಸಂಘದ ಹಾರ್ಮೋನಿಯಂ ಮಾಸ್ಟರ್ ಹಾಗೂ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪ್ರಮುಖರಾದ ಓಬಜ್ಜಿ ಸಣ್ಣ ಹನುಮಂತಪ್ಪ (79) ದಿನಾಂಕ 2.7.2021ರ ಶುಕ್ರವಾರ ನಿಧನ ರಾದರು. ಪತ್ನಿ, ಇಬ್ಬರು ಪುತ್ರಿಯರು, ಮೂವರು ಪುತ್ರರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.7.2021ರ ಶನಿವಾರ ಬೆಳಿಗ್ಗೆ 11 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಬೇಡಿಕೆ ಈಡೇರಿಸಲು ಸಚಿವರಿಗೆ ಬ್ಯೂಟಿ ಪಾರ್ಲರ್ ಸಂಘದ ಮನವಿ



ದಾವಣಗೆರೆ, ಜು.2- ಕೊರೊನಾ ಅಲೆಗಳಿಂದ ಬ್ಯೂಟಿಪಾರ್ಲರ್ ಉದ್ಯಮದಲ್ಲಿ ಕಷ್ಟ - ನಷ್ಟಗಳು, ಆರ್ಥಿಕ ತೊಂದರೆಗಳಾಗುತ್ತಿದ್ದು, ಸರ್ಕಾರದಿಂದ ಸಹಾಯದ ಪ್ಯಾಕೇಜ್ ಘೋಷಿಸುವಂತೆ ಜಿಲ್ಲಾ ಬ್ಯೂಟಿ ಪಾರ್ಲರ್ ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀಮತಿ ಕವಿತಾ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಗೀತಾ ರೆಡ್ಡಿ, ಪದ್ಮಾವತಿ, ಆಶಾ ಕೃಷ್ಣಮೂರ್ತಿ, ಆಶಾ ಶಾಮನೂರು, ಶೈಲಾ, ಲಕ್ಷ್ಮಿ, ಸವಿತಾ, ಸುಪ್ರಭಾ, ಗೀತಾ ಮತ್ತಿತರಿದ್ದರು.

## ಶ್ಯಾಮ್ ಸುಂದರ್ ಮುಖರ್ಜಿ ಸ್ಮರಣಾರ್ಥ ವೃಕ್ಷಾರೋಹಣ



ದಾವಣಗೆರೆ, ಜು.2- ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಎಸ್.ಟಿ.ಮೋರ್ಚಾ ವತಿಯಿಂದ ಡಾ.ಶ್ಯಾಮ್ ಸುಂದರ್ ಮುಖರ್ಜಿ ಅವರ ಸ್ಮರಣಾರ್ಥ ವೃಕ್ಷಾರೋಹಣ ಕಾರ್ಯಕ್ರಮದಡಿಯಲ್ಲಿ ಆವರಗೆರೆ ಗೋಶಾಲೆಯಲ್ಲಿ ಸಸಿ ನೆಟ್ಟು ಪರಿಸರ ಪ್ರೇಮ ಮೆರೆಯಲಾಯಿತು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಕೃಷ್ಣಪ್ಪ, ಉತ್ತರ ವಿಧಾನಸಭಾ ಕ್ಷೇತ್ರದ ಎಸ್.ಟಿ. ಮೋರ್ಚಾ ಅಧ್ಯಕ್ಷ ಗುಮ್ಮನೂರು ಶ್ರೀನಿವಾಸ್, ಉತ್ತರ ಮಂಡಲ ಪ್ರಧಾನ ಕಾರ್ಯದರ್ಶಿ ಬಸರಾಜಯ್ಯ , ಎಸ್.ಟಿ. ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದುರ್ಗೇಶ್ ನಿಟುವಳ್ಳಿ, ಎಸ್ಸಿ ಮೋರ್ಚಾ ಉತ್ತರ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ರವಿ ನಾಯ್ಕ, ರಾಜು ಶಾಮನೂರು, ಸವಿತಾ ರವಿ ಕುಮಾರ್, ಜ್ಯೋತಿ, ಸುರೇಶ್ ಗೋಶಾಲೆ ಮತ್ತಿತರರು ಭಾಗವಹಿಸಿದ್ದರು.

## ಶುಭಲಕ್ಷ್ಮಿ ಮಹಿಳಾ ಮಂಡಳಿಯಿಂದ ಪರಿಸರ ದಿನಾಚರಣೆ



ದಾವಣಗೆರೆ, ಜು.2- ಶುಭಲಕ್ಷ್ಮಿ ಮಹಿಳಾ ಮಂಡಳಿಯ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ನಗರದ ಪಿಸಾಳೆ ಕಾಂಪೌಂಡ್ ನಲ್ಲಿರುವ ಶ್ರೀ ಗುಳ್ಳಮ್ಮ ದೇವಸ್ಥಾನದಲ್ಲಿ ಮಂಡಳಿಯ ಸದಸ್ಯೆಯರಿಂದ ಬನ್ನಿ ಗಿಡ ಹಾಗೂ ಸಸಿ ನೆಟ್ಟು ಪರಿಸರ ಸಂರಕ್ಷಣೆ ಸಂದೇಶ ಸಾರಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಅಧ್ಯಕ್ಷ ನಾಗರಾಜ್ ರಾವ್ ಪಿಸಾಳೆ, ಶುಭಲಕ್ಷ್ಮಿ ಮಹಿಳಾ ಮಂಡಳಿಯ ಗೌರವಾಧ್ಯಕ್ಷೆ ವಸಂತ ಬಾಯಿ, ಅಧ್ಯಕ್ಷೆ ಪದ್ಮಜಾ ರಾವ್, ಉಪಾಧ್ಯಕ್ಷೆ ಅಂಬಿಕಾ ಬಾಯಿ, ಪ್ರಧಾನ ಕಾರ್ಯದರ್ಶಿ ದೀಪ, ಖಜಾಂಚಿ ಸರಳ, ನಂದಿನಿ, ಅಕ್ಕಮಹಾದೇವಿ ಸೇರಿದಂತೆ ಇತರರಿದ್ದರು.

## ಎಸ್.ಬಿ.ಸಿ ಕಾಲೇಜಿನಲ್ಲಿ ಲಸಿಕೆ



ದಾವಣಗೆರೆ, ಜು.2- ನಗರದ ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಇಂದು ಏರ್ಪಾಡಾಗಿದ್ದ ಕೋವಿಡ್ ಲಸಿಕಾ ಶಿಬಿರದಲ್ಲಿ ವಿದ್ಯಾರ್ಥಿನಿಯರು ಮತ್ತು ಸಿಬ್ಬಂದಿ ವರ್ಗದವರು ಲಸಿಕೆ ಪಡೆದರು. ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖ ಮುಂದಾಳತ್ವ ವಹಿಸಿದ್ದರು.

## ಜಿಗಳಿಯಲ್ಲಿ ಉನ್ನತೀಕರಿಸಿದ ಸ.ಹಿ.ಪ್ರಾ. ಶಾಲೆ ಪ್ರಾರಂಭೋತ್ಸವ



ಮಲೇಬೆನ್ನೂರು, ಜು.2- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವವನ್ನು ಸಂಭ್ರಮದಿಂದ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್.ಚಂದ್ರಪ್ಪ, ಉಪಾಧ್ಯಕ್ಷರಾದ ಶ್ರೀಮತಿ ರಶ್ಮಿ ವಿಜಯಭಾಸ್ಕರ, ರಂಗನಾಥ್, ಬಾಲಕೇಂದ್ರದ ಅಧ್ಯಕ್ಷ ಡಿ.ಪಿ.ಚಿದಾನಂದ್, ವಿಜಯ್ ಭಾಸ್ಕರ್, ಮುಖ್ಯೋಪಾಧ್ಯಾಯ ಕರಿಬಸಪ್ಪ, ಶಿಕ್ಷಕರಾದ ನಾಗೇಶ್, ಶ್ರೀನಿವಾಸ್ ರೆಡ್ಡಿ, ನಿಂಗರಾಜ್, ಗುಡ್ಡಪ್ಪ, ಲೋಕೇಶ್ ಹಾಗೂ ಮತ್ತಿತರರಿದ್ದರು.

### ಮೀಟರ್ ಬೋರ್ಡ್‌ಗೆ ಸೂಕ್ತ ಸ್ಥಳ ಕಲ್ಪಿಸಿ



ಮಾನ್ಯರೇ,

ಎಸ್. ಎಸ್. ಲೇ ಔಟ್ 'ಬಿ' ಬ್ಲಾಕ್ ನ ಬಾಲಾಜಿ ನಗರದ ನೂತನ ಡಬಲ್ ರೋಡ್ ಪಕ್ಕದಲ್ಲಿ ಮೀಟರ್ ಬೋರ್ಡ್ ಇದಾಗಿದೆ. ಇದನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸುವ ಅಗತ್ಯತೆ ಇದೆ.

-ಹೆಚ್. ಎನ್. ಶಿವಕುಮಾರ್
ಮಾಜಿ ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.

# ಸರ್ಕಾರಿ ಶಾಲೆಯ ಶಿಕ್ಷಕರಿಂದ ಹೀಗೊಂದು ವಿನೂತನ ಪ್ರಯತ್ನ

ಚನ್ನಗಿರಿ, ಜು. 2- ಸರ್ಕಾರಿ ಶಾಲೆಗಳು ಎಂದಾಕ್ಷಣ ಬರೀ ಕೊರತೆ, ಸಮಸ್ಯೆಗಳ ಬಗ್ಗೆಯೇ ಹೆಚ್ಚು ಚರ್ಚೆಗಳಾಗುತ್ತಿದ್ದು, ಆದರೆ ಇಲ್ಲೊಬ್ಬ ಚನ್ನಗಿರಿ ತಾಲ್ಲೂಕಿನ ಮರಬನ ಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ 'ಜಿಲ್ಲಾ ಉತ್ತಮ ಶಿಕ್ಷಕ' ಪ್ರಶಸ್ತಿ ವಿಜೇತ ಶಿಕ್ಷಕ ಎ.ಎನ್.ಚಂದ್ರಶೇಖರ್ ವಿನೂತನ ಪ್ರಯತ್ನದ ಮೂಲಕ ಗಮನ ಸೆಳೆದಿದ್ದಾರೆ.

ಕಳೆದ ಎರಡು ವರ್ಷಗಳಿಂದ ಲಾಕ್‌ಡೌನ್‌ನಿಂದ ಶಾಲೆಗಳು ತೆರೆಯದೇ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಶಿಕ್ಷಣ ಇಲಾಖೆ ವಿದ್ಯಾಗಮ ಎಂಬ ಯೋಜನೆ ಮುಖಾಂತರ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅವಕಾಶ ನೀಡಿತ್ತಾದರೂ ಕೊರೊನಾದ ಕರಿ ನೆರಳು ಇದರ ಮೇಲೂ ಚೆಲ್ಲಿ ಈ ಯೋಜನೆಯು ಅರ್ಧಕ್ಕೆ ನಿಲ್ಲುವಂತಾಯಿತು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರ ಚಂದನ ವಾಹಿನಿಯಲ್ಲಿ ಜುಲೈ ತಿಂಗಳಿಂದ 1ನೇ ತರಗತಿಯಿಂದ 10 ನೇ ತರಗತಿಯವರೆಗೆ ಪಾಠಗಳನ್ನು ಪ್ರಸಾರ ಮಾಡಲು ಯೋಜನೆ ಹಮ್ಮಿಕೊಂಡಿದೆ. ಈ ಯೋಜನೆಯ ಬಗ್ಗೆ ಸಾಕಷ್ಟು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಮಾಹಿತಿ ಕೊರತೆಯಿರುವ ಹಿನ್ನೆಲೆಯಲ್ಲಿ ಈ ಶಿಕ್ಷಕ ಧ್ವನಿವರ್ಧಕದ ಮೂಲಕ ಹಳೆಯ ವಿದ್ಯಾರ್ಥಿಗಳ ನೆರವಿನಿಂದ ಚಂದನ ವಾಹಿನಿಯಲ್ಲಿ ಪ್ರಸಾರವಾಗುವ ಪಾಠ-ಪ್ರವಚನಗಳ ಕುರಿತು ಗ್ರಾಮದ ಪ್ರತಿಯೊಂದು ಬೀದಿಗಳಲ್ಲಿ ಸಂಚರಿಸಿ, ಮಾಹಿತಿ ಮುಟ್ಟಿಸುವ ಕೆಲಸವನ್ನು ಮಾಡಿ ಶಿಕ್ಷಣ ಇಲಾಖೆಯ ಮತ್ತು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಗಿದ್ದಾರೆ.




ಗ್ರಾಮದಲ್ಲಿ ಸಮೀಕ್ಷೆ ನಡೆಸಿದಾಗ ಬಹಳಷ್ಟು ಪೋಷಕರ ಬಳಿ ಆಂಡ್ರಾಯ್ಡ್ ಮೊಬೈಲ್ ಇಲ್ಲದ ಹಿನ್ನೆಲೆಯಲ್ಲಿ ಆನ್‌ಲೈನ್ ತರಗತಿಗಳ ಉಪಯೋಗ ಪಡೆದುಕೊಳ್ಳದೇ ವಿದ್ಯಾಥಿಗಳು ವಂಚಿತರಾಗುತ್ತಿದ್ದದ್ದು ಗಮನಕ್ಕೆ ಬಂದಿತು. ಆದ್ದರಿಂದ ಚಂದನ ವಾಹಿನಿಯಲ್ಲಿ ಪ್ರಸಾರವಾಗುವ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಪ್ರತಿಯೊಬ್ಬ ವಿದ್ಯಾರ್ಥಿಯು ಮಾಹಿತಿ ಪಡೆದು ಸದುಪಯೋಗ ಪಡಿಸಿಕೊಳ್ಳುವ ಸದುದ್ದೇಶದಿಂದ ಧ್ವನಿವರ್ಧಕದ ಮೂಲಕ ಎಲ್ಲಾ ಶಿಕ್ಷಕಿಯರ ಸಹಾಯದಿಂದ ಮಾಹಿತಿ ಮುಟ್ಟಿಸುವ ಕೆಲಸ ಮಾಡುತ್ತಿದ್ದು, ಗ್ರಾಮಸ್ಥರು ಶಾಲೆಯ ಅಭಿವೃದ್ಧಿಗೆ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೂ ಅತ್ಯುತ್ತಮ ಸ್ಪಂದನೆ ನೀಡುತ್ತಿದ್ದಾರೆ ಎನ್ನುತ್ತಾರೆ ಶಿಕ್ಷಕ ಎ.ಎನ್.ಚಂದ್ರಶೇಖರ್.

ಶಾಲೆಯ ಮುಖ್ಯೋಪಾಧ್ಯಾಯಿನಿಯಾದ ಎಸ್.ಆರ್.ಪುಷ್ಪಾವತಿ, ಶಿಕ್ಷಕ ಎ. ಎನ್.ಚಂದ್ರಶೇಖರ್ ಮತ್ತು ಶಿಕ್ಷಕಿಯರಾದ ಟಿ.ಆರ್.ರೇಖಾ, ಶಮೀಮ್ ಬಾನು ಇವರುಗಳು ಪ್ರತಿಯೊಬ್ಬ ವಿದ್ಯಾರ್ಥಿಯ ಮನೆಗೂ ಭೇಟಿ ಸಮೀಕ್ಷೆ ನಡೆಸಿ, ಆಂಡ್ರಾಯ್ಡ್ ಮೊಬೈಲ್ ಇರುವ ಪ್ರತಿಯೊಬ್ಬ ವಿದ್ಯಾರ್ಥಿಗಳ ತರಗತಿವಾರು ವಾಟ್ಸಾಪ್ ಗ್ರೂಪ್ ರಚಿಸಿ, ಪಾಠಗಳ ಲಿಂಕ್‌ನ್ನು ಮತ್ತು ಓದು - ಬರಹಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಳುಹಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಯ ಬಗ್ಗೆ ವಿಶೇಷ ಗಮನಹರಿಸಿದ್ದಾರೆ.

# ಸಚಿವ ಶ್ರೀರಾಮುಲು ಆಪ್ತನ ಬಂಧನ

**(1ನೇ ಪುಟದಿಂದ)** ಯಡಿಯೂರಪ್ಪ ಹಾಗೂ ಪುತ್ರ ಬಿ.ವೈ.ವಿಜಯೇಂದ್ರ ಅವರ ನಡೆಗೆ ಅಸಮಾಧಾನ ಹೊರಹಾಕಿದ್ದಾರೆ.

ಬಿಜೆಪಿಯಲ್ಲಿ ಹಿರಿಯರಿಗೆ ಅಪಮಾನವಾಗುತ್ತಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಿಮ್ಮ ಪ್ರಶ್ನೆ ಸಮಂಜಸವಾಗಿದೆ. ನೀವು ಹೇಳಿರುವುದು ಸರಿಯಾಗಿಯೇ ಇದೆ. ಇದನ್ನು ನಾನು ಕೂಡ ಒಪ್ಪುತ್ತೇನೆ ಎಂದು ಹೇಳಿದರು.

ಸರ್ಕಾರ ಮತ್ತು ಪಕ್ಷದಲ್ಲಿ ನಡೆಯುತ್ತಿರುವ ಕೆಲವು ಬೆಳವಣಿಗೆಗಳಿಂದ ನೋವಾಗುತ್ತಿದೆ. ವೈಯಕ್ತಿಕವಾಗಿ ನಾನು ಯಾರ ಬಗ್ಗೆಯೂ ಟೀಕೆ ಮಾಡುವುದಿಲ್ಲ ಎನ್ನುತ್ತಲೇ ವಿಜಯೇಂದ್ರ ವಿರುದ್ಧ ಕಿಡಿಕಾರಿದರು.

ನನ್ನ ಆಪ್ತ ಸಹಾಯಕನನ್ನು ಸಿಸಿಬಿ ಪೊಲೀಸರು ಬಂಧಿಸಿರುವುದರಿಂದ ನನಗೆ ವೈಯಕ್ತಿಕವಾಗಿ ಮನಸ್ಸಿಗೆ ನೋವಾಗಿದೆ. ಬಿ.ವೈ.ವಿಜಯೇಂದ್ರ ಇದನ್ನು ನನ್ನ ಗಮನಕ್ಕೆ ತಂದಿದ್ದರೆ, ನಾನೇ ಸರಿಪಡಿಸುತ್ತಿದ್ದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯಾರಿಗಾದರೂ ಸರ್ಕಾರಿ ಕೆಲಸ ಕೊಡಿಸುವ, ಅಧಿಕಾರಿಗಳ ವರ್ಗಾವಣೆ, ಇಲ್ಲವೇ ಮುಖ್ಯಮಂತ್ರಿಗಳ ಕಚೇರಿ ಹೆಸರು ಬಳಸಿಕೊಂಡು ದುರ್ಬಳಕೆ ಮಾಡಿರುವ ನಿದರ್ಶನಗಳಿದ್ದರೆ ನನ್ನ ಗಮನಕ್ಕೆ ತಂದಿದ್ದರೆ ಖಂಡಿತವಾಗಿಯೂ ನಾನು ಕ್ರಮ ಕೈಗೊಳ್ಳುತ್ತಿದ್ದೆ ಎಂದು ತಿಳಿಸಿದರು.

ದೂರು ನೀಡಿರುವುದರ ಬಗ್ಗೆ ನನಗೇನೂ ಅಸಮಾಧಾನವಿಲ್ಲ. ನನ್ನ ಆಪ್ತ ಹೆಸರನ್ನು ದುರುಪಯೋಗಪಡಿಸಿಕೊಂಡಿದ್ದರೆ ಕೆಲಸದಿಂದ ಕಿತ್ತು ಹಾಕುತ್ತಿದ್ದೆ. ಏಕಾಏಕಿ ಇಂತಹ ಘಟನೆ ನಡೆದಿರುವುದು ನನ್ನ ಮನಸ್ಸಿಗೂ ನೋವು ತಂದಿದೆ ಎಂದರು.

ಯಾರೊಬ್ಬರೂ ಕೂಡ ಯಾರ ಹೆಸರನ್ನೂ ದುರ್ಬಳಕೆ ಮಾಡಿಕೊಳ್ಳಬಾರದು. ನಾವು ನಂಬಿಕೆ, ವಿಶ್ವಾಸದ ಮೇಲೆ ಕೆಲವರನ್ನು ನೇಮಿಸಿಕೊಂಡಿರುತ್ತೇವೆ. ನಮ್ಮ ಹೆಸರಿಗೆ ಮಸಿ ಬಳಿಯುವ ಯತ್ನ ಮಾಡಲಾಗುತ್ತಿದೆ ಎಂದು ದೂರಿದರು.

ಈ ಸಂಬಂಧ ನಾನು ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತೇನೆ. ನನ್ನ ಹೆಸರಿನಲ್ಲಿ ಹಣ ಕೇಳಿದರೆ ಕೊಡಬಾ ರದು. ರಾಜು ನನಗೆ ಅತ್ಯಂತ ಆತ್ಮೀಯನಾಗಿದ್ದ. ಆತನ ವಂಚನೆ ಬಗ್ಗೆ ಮಾಹಿತಿ ಇರಲಿಲ್ಲ ಎಂದು ಹೇಳಿದರು.

ಈಗಾಗಲೇ ಎಫ್‌ಐಆರ್ ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ. ಇಂಥ ಸಂದರ್ಭದಲ್ಲಿ ನಾನು ಹೆಚ್ಚು ಮಾತನಾಡುವುದಿಲ್ಲ. ತನಿಖೆ ನಡೆದು ಸತ್ಯಾಸತ್ಯತೆ ಹೊರಬರಲಿ. ಪ್ರಕರಣದ ಬಗ್ಗೆ ವಿಜಯೇಂದ್ರ ಜೊತೆಯೂ ಮಾತನಾಡುವುದಾಗಿ ಹೇಳಿದರು.

ಈ ಮಧ್ಯೆ, ವಿಧಾನಸೌಧದಲ್ಲಿ ನಡೆದ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ನಂತರ ಶ್ರೀರಾಮುಲು ಮುಖ್ಯಮಂತ್ರಿಯವರಿಗೆ ಹೇಳದೆ ಹೊರ ನಡೆಯುತ್ತಿದ್ದರು.

ಇದನ್ನು ಕಂಡ ಮುಖ್ಯಮಂತ್ರಿ ಅವರು, ಅವರನ್ನು ಭುಜದ ಮೇಲೆ ಕೈ ಇಟ್ಟು, ತಮ್ಮ ಕಚೇರಿವರೆಗೂ ಕರೆದೊಯ್ದರು.

ಅಲ್ಲಿಯೂ ರಾಮುಲು ಕಚೇರಿಗೆ ಒಳಗೆ ಹೋಗಲು ಹಿಂದೆ ಮುಂದೆ ನೋಡುತ್ತಿದ್ದರು. ನಂತರ ಬಲವಂತವಾಗಿ ಅವರನ್ನು ತಮ್ಮ ಕೊಠಡಿಗೆ ಕರೆದುಕೊಂಡು, ಸುಮಾರು 15 ನಿಮಿಷಗಳ ಕಾಲ ಮುಖಾಮುಖಿ ಚರ್ಚೆ ಮಾಡಿ, ಸಮಸ್ಯೆ ಬಗೆಹರಿಸುವ ಭರವಸೆಯಿಟ್ಟು ರಾಮುಲು ಅವರನ್ನು ಕಳುಹಿಸಿಕೊಟ್ಟಿದ್ದಾರೆ.

### ಎಚ್ಚರವಾಗಿರಿ : ವಿಜಯೇಂದ್ರ

**(1ನೇ ಪುಟದಿಂದ)** ತುಸು ಹೆಚ್ಚಾಗಿಯೇ ಬಾಧಿಸುತ್ತದೆ. ಇದು ವಿರೋಧಿಗಳಿಗೆ ಅಪಪ್ರಚಾರದ ಸರಕಾಗಿಯೂ ಬಳಕೆಯಾಗುತ್ತದೆ ಎಂದವರು ಹೇಳಿದ್ದಾರೆ.

ಸಾರ್ವಜನಿಕರು ಮೋಸ ಹೋಗಬಾರದೆಂಬ ಹಿತದೃಷ್ಟಿಯಿಂದ ಹಾಗೂ ನನ್ನ ವ್ಯಕ್ತಿತ್ವ ರಕ್ಷಣೆಗಾಗಿ ಸಚಿವ ಶ್ರೀರಾಮುಲು ಆಪ್ತರ ವಿರುದ್ಧ ದೂರು ನೀಡಬೇಕಾಯಿತು ಎಂದು ಸ್ಪಷ್ಟನೆ ನೀಡಿದ್ದಾರೆ.

## ಕೊರೊನಾದಿಂದ ಮೃತ ಕುಟುಂಬಗಳಿಗೆ ಜಿಲ್ಲಾ ಕಾಂಗ್ರೆಸ್ ಪಕ್ಷದಿಂದ ಸಾಂತ್ವನ



ದಾವಣಗೆರೆ, ಜು.2- ನಗರದಲ್ಲಿ ಕೊರೊನಾದಿಂದ ಮೃತಪಟ್ಟವರ ಮನೆಗೆ ತೆರಳಿ ಜಿಲ್ಲಾ ಕಾಂಗ್ರೆಸ್ ಸಾಂತ್ವನ ಹೇಳಿ, ನಿಮ್ಮ ಕುಟುಂಬದೊಂದಿಗೆ ನಾವಿದ್ದೇವೆ ಎಂಬ ಧೈರ್ಯ ತುಂಬಿತು.

ಶಾಸಕ ಡಾ|| ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರ ಮಾರ್ಗದರ್ಶನದಂತೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್, ಬ್ಲಾಕ್ ಅಧ್ಯಕ್ಷ ಅಯೂಬ್ ಪೈಲ್ವಾನ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೊರೊನಾದಿಂದ ಮೃತಪಟ್ಟ ವ್ಯಕ್ತಿಗಳ ಮನೆಗೆ ತೆರಳಿ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯರಾದ ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಮುಖಂಡರುಗಳಾದ ಮಂಜಮ್ಮ, ಪರಮೇಶ್, ಕೊಡಪಾನ ದಾದಾಪೀರ್, ಆನಂದ್ ಇಟ್ಟಿಗುಡಿ, ಸೂರ್ಯಪ್ರಕಾಶ್, ಮೈನುದ್ದೀನ್, ಮೊಟ್ಟೆ ದಾದಾಪೀರ್ ಮತ್ತಿತರರಿದ್ದರು.

## ನಗರದ ಯುವಕರ ಕಿರುಚಿತ್ರಕ್ಕೆ ಪೂಜೆ



ದಾವಣಗೆರೆ, ಜು.2- ನಗರದ ಯುವಕರು ನಿರ್ಮಿಸುತ್ತಿರುವ 'ACMI ಸೆಕ್ಷನ್ 153A' ಎಂಬ ಕಿರುಚಿತ್ರದ ಪೂಜಾ ಸಮಾರಂಭವು ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಇಂದು ಸರಳವಾಗಿ ನಡೆಯಿತು.

ಪೂಜಾ ಕಾರ್ಯಕ್ರಮವನ್ನು ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ ಅವರು ಕ್ಲಾಪ್ ಮಾಡುವ ಮುಖಾಂತರ ಚಿತ್ರತಂಡಕ್ಕೆ ಶುಭ ಹಾರೈಸಿದರು. ಈ ಚಿತ್ರವು ಥ್ರಿಲ್ಲರ್ ಮತ್ತು ಸಸ್ಪೆನ್ಸ್‌ನಿಂದ ಕೂಡಿದ್ದು, ದಾವಣಗೆರೆಯ ಯುವಕರು ಕಿರುಚಿತ್ರ ಮಾಡುತ್ತಿರುವುದು ಸಂತಸವಾಗಿದೆ ಎಂದರು.

ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಮಾಜಿ ಮಹಾಪೌರ ಗೋಣೆಪ್ಪ, ಚಿತ್ರದ ನಿರ್ಮಾಪಕ ವೆಂಕಟೇಶ್ ಎಂ.ಗೌಡ, ನಿರ್ದೇಶಕ ವೃಷಭ್ ಗೋಸರ್, ಛಾಯಾಗ್ರಾಹಕ ಇ.ಎನ್.ದೀಪಕ್, ಮನಂಗಿ ರಾಹುಲ್, ಸಂಗೀತ ನಿರ್ದೇಶಕ ವರುಣ್ ವಿ.ಗೌಡ ಮತ್ತು ಚಿತ್ರ ತಂಡದ ಚಂದನ್, ಚೇತನ್ ಬೋವಿದಾದ, ಪ್ರಿಯಾಂಕಾ, ಪುಣ್ಯವತಿ, ನಮ್ರತಾ, ಮಂಜು ಕಿಚ್ಚ, ಈಶ್ವರ್, ತರುಣ್, ನಿಖಿಲ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ದಾಸ್ತಾನಿನ ನಿರ್ಬಂಧ

**(1ನೇ ಪುಟದಿಂದ)** ಮಿತಿ ಸಗಟು ಮಾರಾಟಗಾರರಷ್ಟೇ ಆಗಿದೆ. ನಂತರದಲ್ಲಿ ಆಮದು ಮಾಡಿಕೊಂಡ ದಾಸ್ತಾನಿಗೆ, ಸುಂಕ ಅನುಮತಿ ದೊರೆತ 45 ದಿನಗಳ ನಂತರ ಮಿತಿ ಅನ್ವಯವಾಗಲಿದೆ. ಮಿತಿಗಿಂತ ಹೆಚ್ಚಾದ ದಾಸ್ತಾನು ಇದ್ದರೆ ಅದನ್ನು ಗ್ರಾಹಕರ ವ್ಯವಹಾರಗಳ ಇಲಾಖೆಯ ಆನ್‌ಲೈನ್ ಪೋರ್ಟಲ್ ಮೂಲಕ ವಿಲೇವಾರಿ ಮಾಡಬೇಕಿದೆ.

ಮಾರ್ಚ್ - ಏಪ್ರಿಲ್ ನಂತರ ಬೇಳೆಗಳ ಬೆಲೆ ನಿರಂತರವಾಗಿ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನಿಯಂತ್ರಣ ಕ್ರಮ ತೆಗೆದುಕೊಂಡಿದೆ.

## ಪ.ಪಂ.ಇಂಜಿನಿಯರ್ ಮೇಲೆ ಹಲ್ಲೆಗೆ ಯತ್ನ

**ಜಗಳೂರು**

ಜಗಳೂರು, ಜು.2- ಪಟ್ಟಣ ಪಂಚಾಯತಿ ವತಿಯಿಂದ 16ನೇ ವಾರ್ಡ್‌ನಲ್ಲಿ ನಡೆಯುತ್ತಿರುವ ಸಿ.ಸಿ ರಸ್ತೆ ಕಾಮಗಾರಿ ವೀಕ್ಷಣೆಗೆ ಇಂಜಿನಿಯರ್ ಶಿವಮೂರ್ತಿ ಅವರು ತೆರಳಿದಾಗ ಗುತ್ತಿಗೆದಾರರ ಸಹಾಯಕರಿಂದ ಏಕವಚನದಲ್ಲಿ ನಿಂದಿಸಿ, ದೈಹಿಕ ಹಲ್ಲೆಗೆ ಮುಂದಾಗಿದ್ದು, ಸೂಕ್ತ ಕಾನೂನು ಕ್ರಮ ಹಾಗೂ ರಕ್ಷಣೆಗಾಗಿ ರಾಜ್ಯ ಪೌರ ಸೇವಾ ಮತ್ತು ನೌಕರರ ಸೇವಾ ಸಂಘದ ಅಧ್ಯಕ್ಷ ಎ.ಕೆ. ಬಸವರಾಜ್ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದಾರೆ. 16ನೇ ವಾರ್ಡ್‌ನ ಲಲಿತಮ್ಮ ಅವರ ಮನೆಯಿಂದ ಎಸ್ಸಿ, ಎಸ್ಟಿ ಹಾಸ್ಟೆಲ್‌ವರೆಗೆ ಸಿಸಿ ರಸ್ತೆ ಕಾಮಗಾರಿ ಗುತ್ತಿಗೆದಾರ ಕೃಷ್ಣಪ್ಪ ಅವರಿಗೆ ಟೆಂಡರ್ ಆಗಿದ್ದು, ಕಳಪೆ ಕಾಮಗಾರಿ ನಡೆಯುತ್ತಿರುವ ಮಾಹಿತಿ ಅನ್ವಯ ಗುಣಮಟ್ಟದ ಸಾಮಗ್ರಿ ಬಳಕೆಗಾಗಿ ಇಂಜಿನಿಯರ್ ಸೂಚಿಸಿದ್ದಾರೆ. ಈ ವೇಳೆ ಗುತ್ತಿಗೆದಾರರ ಸಹಾಯಕ ಹನುಮಂತಪ್ಪ ಅಜಾಕ್ಸ್ ಆಪರೇಟರ್ ಅವರು ಏಕವಚನದಿಂದ ನಿಂದಿಸಿ, ಹಲ್ಲೆಗೆ ಮುಂದಾಗಿದ್ದಾರೆ ಎಂದು ದೂರಲಾಗಿದೆ.

ಪ.ಪಂ ಮುಖ್ಯಾಧಿಕಾರಿ ರಾಜು ಡಿ. ಬಣಕಾರ್, ಕಂದಾಯ ನಿರೀಕ್ಷಕ ಸಂತೋಷ್ ಕುಮಾರ್, ಪೊಲೀಸ್ ಇಲಾಖೆ ನೇತೃತ್ವದಲ್ಲಿ ಪರಿಶೀಲನೆ ನಡೆಸಿದ್ದಾರೆ.

# ದೂಡಾ ವ್ಯಾಪ್ತಿಯ ಅನಧಿಕೃತ ಬಡಾವಣೆಗಳ ತೆರವು

**(1ನೇ ಪುಟದಿಂದ)** ಸಾರ್ವಜನಿಕರು ಬ್ಯಾಂಕ್‌ನಿಂದ ಸಾಲ ಪಡೆಯುವಲ್ಲಿ ವಂಚಿತರಾಗಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ಇಂತಹ ಬಡಾವಣೆಗಳಿಗೆ ಬೆಸ್ಕಾಂ ಇಲಾಖೆಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು, ಕೂಡಲೇ ವಿದ್ಯುತ್ ಸಂಪರ್ಕ ತೆರವುಗೊಳಿಸಲು ಸೂಚಿಸ ಲಾಯಿತು. ಮುಂದಿನ ದಿನಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆಯಾಗದೇ ವಿದ್ಯುತ್ ಸಂಪರ್ಕ ಕಲ್ಪಿಸದಂತೆ ತಿಳಿಸಲಾಯಿತು.

ಕಂದಾಯ ಭೂಮಿಯನ್ನು ಅನಧಿಕೃತ ಬಡಾವಣೆಯಾಗಿ ಮಾಡಿದ್ದರೆ, ಅಂತಹ ಭೂಮಿಯನ್ನು ಸರ್ಕಾರಿ ಪಡಾ ಎಂದು ಪಹಣಿಯಲ್ಲಿ ನಮೂದು ಮಾಡಬಹುದಾಗಿದ್ದು, ಅಂತಹ ಭೂಮಿಯನ್ನು ಪರಿಶೀಲಿಸಿ ಕ್ರಮ ವಹಿಸಲು ತಹಶೀಲ್ದಾರರು, ದಾವಣಗೆರೆ ಇವರಿಗೆ ಸೂಚಿಸಲಾಯಿತು ಹಾಗೂ ಅನಧಿಕೃತ ಬಡಾವಣೆಗಳು ಮತ್ತು ಫಾರ್ಮ್ ಹೌಸ್‌ಗಳನ್ನು ಪರಿಶೀಲಿಸಿ ವರದಿ ನೀಡಲು ಸಹಾ ಸೂಚಿಸಲಾಯಿತು.

ಎ-05 ಗುಂಟೆ ಒಳಗಿನ ಕೃಷಿ ಭೂಮಿಗಳನ್ನು ನೋಂದಣಿ ಮಾಡಲು ಸರ್ವೇ ನಕ್ಷೆಯನ್ನು ತಯಾರಿಸುವಾಗ ಕೃಷಿ ಉದ್ದೇಶಕ್ಕಾಗಿ ಮಾತ್ರ ನಕ್ಷೆ ತಯಾರಿಸಲು ಹಾಗೂ ಕೃಷಿಯೇತರ ಉದ್ದೇಶಕ್ಕೆ ನಕ್ಷೆಯನ್ನು ತಯಾರಿಸದಿರಲು ಸಹಾಯಕ ನಿರ್ದೇಶಕರು ಭೂ ಮಾಪನಾ ಇಲಾಖೆಗೆ ಸೂಚಿಸಲಾಯಿತು.

ಅನಧಿಕೃತ ಬಡಾವಣೆಗಳನ್ನು ತಡೆಗಟ್ಟುವುದು ಮತ್ತು ತೆರವುಗೊಳಿಸವುದು ಮಹಾನಗರಪಾಲಿಕೆ, ಬೆಸ್ಕಾಂ ಇಲಾಖೆ, ತಹಶೀಲ್ದಾರರು, ಗ್ರಾಮ ಪಂಚಾಯಿತಿಗಳು, ಆರಕ್ಷಕ ಇಲಾಖೆ, ದೂಡಾ ಜವಬ್ದಾರಿಯಾಗಿರುತ್ತದೆ. ಹಾಗಾಗಿ ಈ ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ 8 ಮತ್ತು 9 ರಂದು ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸಲು ತೀರ್ಮಾನಿಸಲಾಗಿದ್ದು, ಆರಕ್ಷಕ ಇಲಾಖೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಬಂದೋಬಸ್ತ್ ಒದಗಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಮಾಡಲಾಗಿದೆ ಎಂದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಜಂಟಿ ನಿರ್ದೇಶಕ ಎಂ. ಅಣ್ಣಪ್ಪ, ಸಹಾಯಕ ನಿರ್ದೇಶಕ ರೇಣುಕಾ ಪ್ರಸಾದ್, ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಹೆಚ್.ಶ್ರೀಕರ್, ಪೊಲೀಸ್ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಕೊರೊನಾ : ಮಾಸ್ಕ್ ಧರಿಸದವರಿಗೆ ದಂಡ



**ಹರಪನಹಳ್ಳಿ**

ಹರಪನಹಳ್ಳಿ, ಜು.2- ಕೊರೊನಾ ಸೋಂಕು ಇಳಿಮುಖವಾಗುತ್ತಿದ್ದಂತೆ ಲಾಕ್‌ಡೌನ್ ಸಡಿಲಿಕೆಗೊಳಿಸಿದ ಪರಿಣಾಮ ಸಾರ್ವಜನಿಕರು ಮಾಸ್ಕ್ ಮರೆತು ರಸ್ತೆಯಲ್ಲಿ ಬೇಕಾಬಿಟ್ಟಿ ಸಂಚರಿಸುತ್ತಿದ್ದ ದೃಶ್ಯ ಕಂಡು ಸ್ವತಃ ತಹಶೀಲ್ದಾರ್ ಎಲ್.ಎಂ. ನಂದೀಶ್ ಅವರೇ ಲಾಟಿ ಹಿಡಿದು ರಸ್ತೆಗೆ ಇಳಿದು ಮಾಸ್ಕ್ ಧರಿಸದ ವಾಹನ ಸವಾರರಿಗೆ ಹಾಗೂ ಅಂಗಡಿ ಮಾಲೀಕರಿಗೆ ದಂಡ ವಿಧಿಸಿದರು. ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಬಿ.ಆರ್. ನಾಗರಾಜ್ ನಾಯ್ಕ, ಹಿರಿಯ ಆರೋಗ್ಯ ನಿರೀಕ್ಷಕ ಬಿ. ಮಂಜುನಾಥ್, ಎಎಸ್‌ಐ ಜಾತಪ್ಪ, ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ ಸೇರಿದಂತೆ ಇನ್ನಿತರರಿದ್ದರು.

# ಪುತ್ರನ ಜನ್ಮದಿನಕ್ಕೆ ಪೌರ ಕಾರ್ಮಿಕರಿಗೆ ವಿಮೆ ಮಾಡಿಸಿದ ಪಾಲಿಕೆ ಸದಸ್ಯೆ



ದಾವಣಗೆರೆ, ಜು.2- ಮಹಾನಗರ ಪಾಲಿಕೆಯ 42ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಗೌರಮ್ಮ ಗಿರೀಶ್ ಅವರು ತಮ್ಮ ಪುತ್ರ ಸಚಿನ್ ಜನ್ಮದಿನಕ್ಕೆ ತಮ್ಮ ವಾರ್ಡಿನ ಪೌರ ಕಾರ್ಮಿಕರಿಗೆ ಮುಂದಿನ 3 ವರ್ಷಗಳ ವಿಮಾ ಮೊತ್ತವನ್ನು ಉಡುಗೊರೆಯಾಗಿ ಪಾವತಿಸಿಸುವುದರ ಮೂಲಕ ಸ್ವಚ್ಛತಾ ಸಿಬ್ಬಂದಿಗಳನ್ನು ಗೌರವಿಸಿದ್ದಾರೆ.

ಮುಂದಿನ 3 ವರ್ಷಗಳ ಅವಧಿಯಲ್ಲಿ ಪೌರ ಕಾರ್ಮಿಕರಿಗೆ ಮರಣ ಹೊಂದಿದ್ದಲ್ಲಿ, 5 ಲಕ್ಷ ರೂ.ಗಳ ವಿಮಾ ಮೊತ್ತ ಅವರ ಕುಟುಂಬಕ್ಕೆ ನೀಡಲಾಗುತ್ತದೆ.

ಕೊರೊನಾದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ನಗರವನ್ನು ಸ್ವಚ್ಛಗೊಳಿಸುತ್ತಾ, ನಿರಂತರ ಸಾರ್ವಜನಿಕರ ಸೇವೆ ಮಾಡುತ್ತಿರುವ ಸ್ವಚ್ಛತಾ ಸಿಬ್ಬಂದಿಗೆ ತಾವು ಕಿರುಕಾಣಿಕೆ ನೀಡಿರುವುದಾಗಿ ಗೌರಮ್ಮ ಸಂತಸ ವ್ಯಕ್ತಪಡಿಸಿದ್ದಾರೆ.

ವಿಮಾ ಪತ್ರವನ್ನು ನಗರ ಪಾಲಿಕೆಯ ಮಹಾಪೌರ ಎಸ್.ಟಿ.ವೀರೇಶ್ ಅವರು ಪೌರ ಕಾರ್ಮಿಕರಿಗೆ ವಿತರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಪ್ರಸನ್ನಕುಮಾರ್, ವಾರ್ಡಿನ ವಿನಯ್, ಜಯಪ್ರಕಾಶ್, ನರೇಂದ್ರ ಕುಮಾರ್, ಗಿರೀಶ್, ಸಚಿನ್, ನಾರಪ್ಪ ಹಾಗೂ ಪೌರ ಕಾರ್ಮಿಕರು ಉಪಸ್ಥಿತರಿದ್ದರು.

## ಶಿಕ್ಷಕ ರಾಮಪ್ಪ ಅವರಿಗೆ ಬೀಳ್ಕೊಡುಗೆ



**ಕೂಡ್ಲಿಗಿ**

ಕೂಡ್ಲಿಗಿ, ಜು.2- ತಾಲ್ಲೂಕಿನ ಮರಬ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಬಿ. ರಾಮಪ್ಪ ವಯೋನಿವೃತ್ತಿ ಹೊಂದಿದ್ದು, ಅವರಿಗೆ ಬೀಳ್ಕೊಡುಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಶಿಕ್ಷಕ ಜಯರಾಮ್, ಸುಮಂಗಳಮ್ಮ, ಕೆ. ಚಂದ್ರಪ್ಪ ರಾಮಪ್ಪ, ಜಂಬುಕೇಶ್ವರಿ, ಕೊಟ್ರೇಶ್, ಶಿಲ್ಪ, ವಿಮಲ್ ಹಾದಿಮನಿ, ಅಮೃತ, ಶಿಕ್ಷಣ ಇಲಾಖೆಯ ಕೊಟ್ಲಪ್ಪ, ಸಿಆರ್‌ಪಿ ದೊಡ್ಡಪ್ಪ ಮತ್ತಿತರರು ಉಪಸ್ಥಿತರಿದ್ದರು.


## ಬಾಡಿಗೆಗೆ ಇವೆ

**ಬಿಐಇಟಿ ಕಾಲೇಜ್ ರಸ್ತೆ, ಸಿದ್ದವೀರಪ್ಪ ಬಡಾವಣೆ, ಮೋರ್ ಸೂಪರ್ ಮಾರ್ಕೆಟ್ ಪಕ್ಕ, ದಾವಣಗೆರೆ.**

* ಗ್ರೌಂಡ್ ಫ್ಲೋರ್‌ನಲ್ಲಿ ಹೋಟೆಲ್‌ಗೆ ಸೂಕ್ತವಾದ ಜಾಗ
* ಮೊದಲನೇ ಮಹಡಿಯಲ್ಲಿ 250 ಚ.ಅಡಿ ಇರುವ ಹಾಲ್ ಆಫೀಸ್‌ಗೆ ಯೋಗ್ಯವಾಗಿದೆ.
* ಗ್ರೌಂಡ್ ಫ್ಲೋರ್‌ನಲ್ಲಿ ಎರಡು ಮಳಿಗೆಗಳು ಇವೆ.
* ಬೋರ್ ನೀರಿನ ಸೌಲಭ್ಯವಿದೆ.

**99169 19491, 88618 41515**



ಒ.ಎಸ್. ನಂ: 5/2020

**ಮಾನ್ಯ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಿರೇಕೆರೂರ**

**ವಾದಿಯರು:** 1) ಕಮಲಮ್ಮ ಕೋಂ ವೀರಪ್ಪ @ ವೀರಾಚಾರಿ ಬಡಿಗೇರ ಹಾಗೂ ಇತರರು.

**ವಿರುದ್ಧ ಪ್ರತಿವಾದಿಯರು:** 1) ಸುವರ್ಣಮ್ಮ ಕೋಂ ಗಣೇಶಚಾರ ಅರ್ಕಾಚಾರಿ ಹಾಗೂ ಇತರರು

**ಇಸ್ತಿಯಾರ ನಾಮೆ**

ಮೇಲ್ಕಂಡ ದಾವಾದ ವಾದಿಯರು ಒಟ್ಟು ಕುಟುಂಬದ ಆಸ್ತಿಗಳಲ್ಲಿ ತಮಗೆ ಇರುವ ಹಿಸ್ಸೆಯನ್ನು ವಿಂಗಡಿಸಿಕೊಡುವಂತೆ ಮೇಲ್ಕಂಡ ದಾವೆ ದಾಖಲಿಸಿದ್ದು, ಸದರಿ ದಾವೆಯ 6 ರಿಂದ 8ನೇ ಪ್ರತಿವಾದಿಯರಾದ 6) ಅನುಸೂಯಮ್ಮ ಕೋಂ ರುದ್ರಪ್ಪ ಕನವಳ್ಳಿ, 7) ಆರ್. ವೀರಣ್ಣ ಬಿನ್ ರುದ್ರಪ್ಪ ಕನವಳ್ಳಿ 8) ಆರ್. ತಿಮ್ಮಣ್ಣ ಬಿನ್ ರುದ್ರಪ್ಪ ಕನವಳ್ಳಿ ಎಲ್ಲರೂ ಸಾ: ಹಗೆದಿಬ್ಬ ಸರ್ಕಲ್, ದಾವಣಗೆರೆ ತಾ/ಜಿ: ದಾವಣಗೆರೆ ಆದ ನಿಮಗೆ ಈಗಾಗಲೇ ಕೋರ್ಟ್ ಮೂಲಕ ಹಾಗೂ ನೋಂದಾಯಿತ ಅಂಚೆ ಮೂಲಕ ನೋಟೀಸ್ ಕಳಿಸಿದ್ದು ಆದರೆ ಸದರಿ ನೋಟೀಸ್ ನಿಮಗೆ ಜಾರಿಯಾಗಿರುವುದಿಲ್ಲ.

ಕಾರಣ ನೀವು, ಮೇಲ್ಕಂಡ ದಾವೆಯಲ್ಲಿ ಹಾಜರಾಗಿ ನಿಮ್ಮ ತಕರಾರು ಸಲ್ಲಿಸುವವರಿದ್ದಲ್ಲಿ, ನೀವು ಖುದ್ದಾಗಿ/ನಿಮ್ಮ ವಕೀಲರ ಮುಖಾಂತರ ದಿ: 03-08-2021 ರಂದು ಮುಂಜಾನೆ 11-00 ಗಂಟೆಗೆ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ವಾದಿಯರ ಮಾಗಣಿಗೆ ನಿಮ್ಮ ತಕರಾರು ಇಲ್ಲ ಅಂತಾ ಪರಿಗಣಿಸಿ ದಾವೆಯ ಮುಂದಿನ ವಿಚಾರಣೆ ಮಾಡಿ ನಿಖಾಲಿ ಮಾಡಲಾಗುವುದು.

ಈ ದಿವಸ ದಿನಾಂಕ: 01-07-2021 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.

**ಸ್ಥಳ : ಹಿರೇಕೆರೂರ**
**ದಿನಾಂಕ : 01.07.2021**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, ಸೀನಿಯರ್ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ. ನ್ಯಾಯಾಲಯ, ಹಿರೇಕೆರೂರ.**

**ವಾದಿಯರ ಪರ ವಕೀಲರು,**
**(ಶ್ರೀ ಹೆಚ್.ಸಿ. ಕರಿನಿಂಗಳವರ)**
**ವಕೀಲರು, ಹಿರೇಕೆರೂರ**

# ಎಸ್ಸೆಸ್‌ರಿಂದ ಉಚಿತ ಲಸಿಕೆ : ಸಿದ್ದರಾಮಯ್ಯ ಮೆಚ್ಚುಗೆ



**ಸಮರ್ಪಕ ಲಸಿಕೆ ಇಲ್ಲದಿದ್ದರೂ ಬಿಜೆಪಿ ಸರ್ಕಾರ ಸುಳ್ಳಾಡುತ್ತಿದೆ**

ದಾವಣಗೆರೆ, ಜು.2- ಕೊರೊನಾ ಸೋಂಕಿನಿಂದ ಜನರನ್ನು ಪಾರು ಮಾಡಲು ಬಿಜೆಪಿ ಸರ್ಕಾರದ ಬಳಿ ಲಸಿಕೆ ಇಲ್ಲದಿದ್ದರೂ ತಮ್ಮ ಬಳಿ ಸಾಕಷ್ಟು ಲಸಿಕೆ ದಾಸ್ತಾನಿದೆ ಎಂದು ಸುಳ್ಳು ಹೇಳಲಾಗುತ್ತಿದೆ. ಲಸಿಕೆ ಇಲ್ಲದ ಕಾರಣ ಸಮರ್ಪಕವಾಗಿ ಪೂರೈಕೆ ಮಾಡುತ್ತಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಕಿಡಿಕಾರಿದರು.

ನಗರ ದೇವತೆ ಶ್ರೀ ದುರ್ಗಾಂಬಿಕ ದೇವಾಲಯದ ಭೋಜನಾಲಯದಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಕುಟುಂಬ ವರ್ಗದಿಂದ ನೀಡಲಾಗುತ್ತಿರುವ ಉಚಿತ ಲಸಿಕಾ ಶಿಬಿರಕ್ಕೆ ಇಂದು ಮಧ್ಯಾಹ್ನ ಭೇಟಿ ನೀಡಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಕೊರೊನಾ ಸೋಂಕಿನಿಂದ ಪಾರಾಗಲು ವ್ಯಾಕ್ಸಿನ್ ಮದ್ದಾಗಿದೆ. ಪ್ರತಿಯೊಬ್ಬರಿಗೂ ಲಸಿಕೆ ಅಗತ್ಯವಾಗಿದೆ. ಪ್ರತಿಯೊಬ್ಬರಿಗೂ ಲಸಿಕೆ ಕೊಡಿಸುವ ಕೆಲಸ ಸರ್ಕಾರದ್ದು. ಆದರೆ ಸರ್ಕಾರ ಅದನ್ನು ಸರಿಯಾಗಿ ನಿಭಾಯಿಸದ ಕಾರಣ ಶಾಮನೂರು ಶಿವಶಂಕರಪ್ಪ, ಶಾಮನೂರು ಮಲ್ಲಿಕಾರ್ಜುನ್ ಅವರುಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಲಸಿಕೆ ಹಾಕುವ ಮೂಲಕ ಸಾಕಷ್ಟು ಜೀವಗಳನ್ನು ಉಳಿಸುವ ಮಹತ್ಕಾರ್ಯ ಮಾಡುತ್ತಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಲಸಿಕೆ ನೀಡುವುದು ಸರ್ಕಾರದ ಕೆಲಸ. ಶಾಮನೂರು ಶಿವಶಂಕರಪ್ಪ ಅಥವಾ ಎಸ್. ಮಲ್ಲಿಕಾರ್ಜುನ್ ಅವರ ಕೆಲಸವಲ್ಲ. ಹೀಗಿದ್ದರೂ ಸರ್ಕಾರದ ಬಳಿ ಲಸಿಕೆ ಇಲ್ಲ, ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲ ಎಂಬ ಸಂದರ್ಭದಲ್ಲಿ ಶಾಮನೂರು ಕುಟುಂಬ ಜನರಿಗೆ ಲಸಿಕೆ ಕೊಡುವ ಕೆಲಸ ಮಾಡುತ್ತಿದೆ ಎಂದು ಅವರು ಪ್ರಶಂಸಿಸಿದರು. ಯಾವುದೇ ಕಾರಣಕ್ಕೂ ಬೇಡವೆನ್ನದೇ ಲಸಿಕೆ ಹಾಕಿಸಿಕೊಳ್ಳುವಂತೆ ನಾಗರಿಕರಿಗೆ ಮನವಿ ಮಾಡಿದರು.

ಈ ವೇಳೆ ಶಾಮನೂರು ಶಿವಶಂಕರಪ್ಪ, ಶಾಮನೂರು ಮಲ್ಲಿಕಾರ್ಜುನ್, ಜಿ. ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಜಿಲ್ಲಾ ಕಾಂಗ್ರೆಸ್ ಎಸ್ಸಿ ಮೋರ್ಚಾ ಅಧ್ಯಕ್ಷ ಬಿ. ಹೆಚ್. ವೀರಭದ್ರಪ್ಪ, ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಾಲಯದ ಧರ್ಮದರ್ಶಿ ಗೌಡ್ರು ಚನ್ನಬಸಪ್ಪ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷರಾದ ಅನಿತಾ ಬಾಯಿ ಮಾಲತೇಶ್ ಜಾಧವ್, ಮುಖಂಡರಾದ ಮುದೇಗೌಡ್ರು ಗಿರೀಶ್, ಅಯೂಬ್ ಪೈಲ್ವಾನ್ ಸೇರಿದಂತೆ ಇತರರು ಇದ್ದರು.

# ವಿಜ್ಞಾನಿ, ಬರಹಗಾರ ಸುಧೀಂದ್ರ ಹಾಲ್ದೊಡ್ಡೇರಿ ನಿಧನ



ಬೆಂಗಳೂರು, ಜು. 2 – ಡಿ.ಆರ್.ಡಿ.ಒ. ಮಾಜಿ ವಿಜ್ಞಾನಿ ಹಾಗೂ ವಿಜ್ಞಾನ ಬರಹಗಾರ ಸುಧೀಂದ್ರ ಹಾಲ್ದೊಡ್ಡೇರಿ (61) ಅವರು ನಿಧನರಾಗಿದ್ದಾರೆ. ವಾರದ ಹಿಂದೆ ತೀವ್ರ ಹೃದಯಾಘಾತಕ್ಕೆ ಗುರಿಯಾಗಿದ್ದ ಅವರನ್ನು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮೆದುಳಿಗೆ ಆಕ್ಸಿಜನ್ ಸರಬರಾಜು ನಿಂತಿದ್ದರಿಂದ ಮೆದುಳು ನಿಷ್ಕ್ರಿಯವಾಗಿ ಸಾವು ಸಂಭವಿಸಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಡಿ.ಆರ್.ಡಿ.ಒ.ದಲ್ಲಿ 22 ವರ್ಷ ಕಾರ್ಯ ನಿರ್ವಹಿಸಿದ್ದ ಅವರು, ವಿಜ್ಞಾನದ ವಿಷಯಗಳನ್ನು ಸರಳವಾಗಿ ಬರೆಯುವ ಮೂಲಕ ಜನಪ್ರಿಯರಾಗಿದ್ದರು. ಹಲವಾರು ಪತ್ರಿಕೆಗಳಲ್ಲಿ ಅವರು ಅಂಕಣಕಾರರಾಗಿದ್ದರು.

2018ರಲ್ಲಿ ಅವರು ಕನ್ನಡ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ಪಡೆದಿದ್ದರು. ಶುಕ್ರವಾರವಷ್ಟೇ ಅವರಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಡಾ. ಅನುಪಮಾ ನಿರಂಜನ ವೈದ್ಯಕೀಯ ಮತ್ತು ವಿಜ್ಞಾನ ಸಾಹಿತ್ಯ ಪ್ರಶಸ್ತಿ ಪ್ರಕಟಿಸಲಾಗಿತ್ತು.

ಅದೇ ದಿನವೇ ಅವರು ಕೊನೆಯುಸಿರೆಳೆದಿದ್ದಾರೆ.


## ಹಾರ್ದಿಕ ಅಭಿನಂದನೆಗಳು



ಶ್ರೀಯುತ ಎಂ.ಜಿ. ಪಂಪಾಪತಿ
ಅಸಿಸ್ಟೆಂಟ್ ಕಮೀಷನರ್
ಆಫ್ ಪೊಲೀಸ್, ಬೆಂಗಳೂರು.



ಶ್ರೀಯುತ ಎ.ಬಿ. ರಾಮಚಂದ್ರಪ್ಪ
ಚಿಂತಕರು, ಸಾಹಿತಿಗಳು,
ಪ್ರಾಧ್ಯಾಪಕರು

ಬೆತ್ತ ಮತ್ತು ಲಾಠಿಯನ್ನು ಹಿಡಿದು, ಸರ್ವರನ್ನು ಜಾತ್ಯತೀತವಾಗಿ ತಿದ್ದಿ-ತೀಡಿ ಅಸಂಖ್ಯ ಯುವ ಸಮುದಾಯಕ್ಕೆ ಬದುಕನ್ನು ಕಟ್ಟಿಕೊಳ್ಳಲು ಉತ್ತಮ ಸಂಸ್ಕಾರವನ್ನು ಪಡೆದುಕೊಳ್ಳಲು ಕಾರಣೀಭೂತರಾದ

**ಶ್ರೀಯುತ ಪಂಪಾಪತಿ ಸರ್** ಮತ್ತು **ಪ್ರೊಫೆಸರ್ ರಾಮಚಂದ್ರಪ್ಪ** ಅವರಿಗೆ

ಸಂತೃಪ್ತ ನಿವೃತ್ತಿಯ ಅಭಿನಂದನೆಗಳು.
ತಮ್ಮ ಮುಂದಿನ ನಿವೃತ್ತಿಯ ಜೀವನ ಸುಖಕರವಾಗಿರಲಿ ಮತ್ತು ನಿವೃತ್ತಿಯ ಚೌಕಟ್ಟಿನ ಆಚೆಗೆ ಕೂಡ ಹೊಸ ತಲೆಮಾರಿಗೆ ತಮ್ಮ ಸೇವೆ ನಿರಂತರ ಮುಂದುವರೆಯಲಿ ಎಂದು ಹಾರೈಸುತ್ತಾ...

ಇಂತಿ ನಿಮ್ಮ ಪ್ರೀತಿಯ
**ಪ್ರವೀಣ್ ಶಾಮನೂರು**
ಕಾಂಗ್ರೆಸ್ ಮುಖಂಡರು, ಶಾಮನೂರು.


## ಚಂದನದಲ್ಲಿ ಇಂದು ಬಿ.ಎನ್. ಮಲ್ಲೇಶ್



ದೂರದರ್ಶನ 'ಚಂದನ'ದಲ್ಲಿ ಇಂದು ರಾತ್ರಿ 9.30 ಕ್ಕೆ ಪ್ರಸಾರವಾಗುವ 'ಲಿಟರರಿ ಗುರು' ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ - ಅಂಕಣಕಾರ ಬಿ.ಎನ್.ಮಲ್ಲೇಶ್ ಅವರ ಸಂದರ್ಶನ ಪ್ರಸಾರವಾಗಲಿದೆ. ಕವಿ - ಪತ್ರಕರ್ತ ಜಿ.ಎನ್. ಮೋಹನ್ ಅವರು ಮಲ್ಲೇಶ್ ಅವರನ್ನು ಸಂದರ್ಶಿಸಲಿದ್ದಾರೆ. ಇದೇ ಕಾರ್ಯಕ್ರಮವು ನಾಳೆ ಭಾನುವಾರ ಮಧ್ಯಾಹ್ನ 2 ಗಂಟೆಗೆ ಮರು ಪ್ರಸಾರವಾಗಲಿದೆ.

## ಆನ್ಲೈನ್ ತರಗತಿ ಬಹಿಷ್ಕಾರ ಇಂದು

'ಹಿಂದಿನ ಸೆಮಿಸ್ಟರ್ ಪರೀಕ್ಷೆ ರದ್ದುಗೊಳಿಸಿ' ಎಂದು ಒತ್ತಾಯಿಸಿ ರಾಜ್ಯ ಮಟ್ಟದ ವಿದ್ಯಾರ್ಥಿಗಳ ಹೋರಾಟ ಸಮಿತಿ ಮತ್ತು ಎಐಡಿಎಸ್‌ಒ ರಾಜ್ಯ ಸಮಿತಿ ಜಂಟಿಯಾಗಿ ಇಂದು ವಿದ್ಯಾರ್ಥಿಗಳ ಆನ್ಲೈನ್ ತರಗತಿ ಬಹಿಷ್ಕಾರಕ್ಕೆ ಕರೆ ನೀಡಿದೆ ಎಂದು ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಎನ್. ಪೂಜಾ ತಿಳಿಸಿದ್ದಾರೆ.

## ಆಕ್ಸಿಜನ್ ಕಾನ್ಸಂಟ್ರೇಟರ್‌ಗಾಗಿ ನಗರದ ರೆಡ್‌ಕ್ರಾಸ್ ಸಂಸ್ಥೆಗೆ ಸಂಪರ್ಕಿಸಿ

ದಾವಣಗೆರೆ, ಜು.2- ಕೊರೊನಾ ಸೋಂಕಿನಿಂದ ಗುಣಮುಖರಾದವರಿಗೆ 5 ಲೀಟರ್ ಸಾಮರ್ಥ್ಯದ ಆಕ್ಸಿಜನ್ ಕಾನ್ಸಂಟ್ರೇಟರ್ ನೀಡಲಾಗುವುದು. ಅವಶ್ಯಕತೆ ಇರುವವರು ನಗರದ ರೆಡ್‌ಕ್ರಾಸ್ ಸಂಸ್ಥೆಯನ್ನು ಸಂಪರ್ಕಿಸುವಂತೆ ಜಿಲ್ಲಾ ಶಾಖೆಯ ಚೇರ್ಮನ್ ಡಾ. ಎ.ಎಂ. ಶಿವಕುಮಾರ್ ತಿಳಿಸಿದ್ದಾರೆ. ವಿವರಕ್ಕೆ ಆನಂದ ಜ್ಯೋತಿ (9845299152), ಡಿ.ಎಸ್. ಸಾಗರ್ (8971471887) ಅವರನ್ನು ಸಂಪರ್ಕಿಸುವಂತೆ ಸಂಸ್ಥೆಯ ಪಿಆರ್‌ಒ ಶ್ರೀಕಾಂತ್ ಬಗರೆ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬಿಐಇಟಿ ಕಾಲೇಜು, ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಗ್ಲಾಸ್ ಹೌಸ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.


॥ಶ್ರೀ ವೀರಭದ್ರೇಶ್ವರ ಪ್ರಸನ್ನ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಕೆ.ಬಿ. ಬಡಾವಣೆ ನಿವಾಸಿ ಶ್ರೀಮತಿ ಸುನಂದಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 25.06.2021ನೇ ಶುಕ್ರವಾರ ಮಧ್ಯಾಹ್ನ 1.30ಕ್ಕೆ ನನ್ನ ಪೂಜ್ಯ ಪತಿಯವರಾದ

**ಎಂ.ಕೆ. ರಾಜಶೇಖರಪ್ಪ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ' ಯನ್ನು**

ದಿನಾಂಕ : 03.07.2021 ಶನಿವಾರ ಬೆಳಿಗ್ಗೆ 11.00 ಗಂಟೆಗೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು :
ಶ್ರೀಮತಿ ಸುನಂದಮ್ಮ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು
98441 38240, 98450 55049



## 11ನೇ ವರ್ಷದ ಚಿರಸ್ಮರಣೆ



**ದಿ. ಎನ್.ಕೆ. ಚನ್ನವೀರಪ್ಪನವರು**

ಜನನ : 02.04.1934 - ಮರಣ : 03.07.2010

ನೀವು ನಮ್ಮನ್ನಗಲಿ ಹನ್ನೊಂದು ವರ್ಷಗಳಾದವು. ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ತುಂಬಿದೆ. ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪ.
ಶ್ರೀಮತಿ ಸುಶೀಲಮ್ಮ ಮತ್ತು ಮಕ್ಕಳು ಹಾಗೂ ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುಗಳು

ಎನ್.ಕೆ. ಚನ್ನವೀರಪ್ಪ ಮತ್ತು ಮಕ್ಕಳು
ನೀರುಳ್ಳಿ ವ್ಯಾಪಾರಿಗಳು, (94486-66322)
ಸಂಗಮ್ ಏಜೆನ್ಸೀಸ್, ವೀಡಾಲ್ ಲೂಬ್ರಿಕೆಂಟ್ಸ್
ಎಪಿಎಂಸಿ ಯಾರ್ಡ್, ಪಿ.ಬಿ. ರಸ್ತೆ, ದಾವಣಗೆರೆ. (98452-50795)
ಶ್ರೀ ವೀರಭದ್ರೇಶ್ವರ ಟ್ರೇಡರ್ಸ್,
ಈರುಳ್ಳಿ ವ್ಯಾಪಾರಿಗಳು (98452 59395)





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte